   Department of Community Medicine,
   Gadag Institute of Medical Sciences, Gadag-582103.
   Ph: 9886237787, E-mail: drrekha.sonavane@gmail.com, .. Member

7. Dr. Shailaja Patil
   Professor and Head of the Department Community Medicine,
   Shri B. M. Patil Medical College (BLDE deemed to be university),
   Bangaramma Sajjan Campus, Vijayapura- 586103.
   Ph:9448820464, E-mail: shailaja.dr@gmail.com, ... Member

8. Dr. Allen P. Ugargol
   Dean Academics,
   Institute of Health Management Research (IIHMR-B),
   South Campus, IIHMR Group, Sy. No. 319, Hulimangala,
   Electronic City Phase I, Bengaluru- 560 105.
   Ph: 8095719044, E-mail: allen.ugargol@gmail.com, ... Member

9. Dr. Nagaveni S. J.
   Guest Faculty, School of Environmental Science, Public Health and Sanitation Management, KSRDPRU, Gadag.
   Ph: 9902591021, E-mail: nagaveni.p@gmail.com, .. Co-ordinator

**VII. BoS (Ad-hoc) in English Communication Skills:**

1. Smt. T.N. Gayathridevi
   Director, Regional Institute of English South India,
   Jnanabharathi Campus,
   Bengaluru- 560056. Email: riesi.bangalore@gmail.com,
   Ph: 080-23218452 ... Chairperson (I/c)

2. Prof. Chitra Pannikar
   Department of English, Bangalore University,
   Jnanabharathi Campus, Bengaluru- 560056.
   Email: chaitram2000@yahoo.com, Ph: 9448375856 .. Member

3. Prof. Krishna Kumari Manavalli
   Department of English, Pavate Nagar,
   Karnatak University, Dharwad – 580003
   Email: manavalli@hotmail.com, .. Member

4. Mrs. Mangala V. Radder
   Guest Faculty, English Communication Skills,
   KSRDPRU, Gadag, Ph: 9535663922 .. Co-ordinator

**VIII. BoS (Ad-hoc) in M.A. Economics:**

1. Prof. S. R. Keshava
   Department of Economics,
   Bangalore University, Bengaluru-560 056.
   Email: sr_keshava@yahoo.com, Ph: 9480584544 .. Chairperson

2. Prof. Pushpa M. Savadatti
   Department of Economics,
   Central University of Karnataka,
   Kadaganchi, Aland Road, Kalaburgi-585 367.
   E-mail: pmsavadatti@cuk.ac.in, pmsavadatti@gmail.com Member

3. Prof. V.S. Mangnale
   Director,
   Abhijit Kadam Institute of Management & Social Sciences,
   Bharati Vidhyapeeth, Bijapur Road,
   Solapur-413 004.
   Ph: 09881476717, e-mail: mangnale.vs@gmail.com .. Member

4. Dr. Basavaraj Benni,
   Department of Economics
   VSK University, Ballari- 583 105.
   Ph: 9423276500, E-mail:bsbenni@gmail.com ... Member

5. Dr. B. H. Nagoor
   Professor, Department of Economics,
   Karnatak University, Pavate Nagar, Dharwad-580 003.
   Ph: 9448112166, E-mail: nagoor_bh@yahoo.co.in .. Member

6. Dr. Uma M.H.
   Associate Professor
   CMS Business School, Jain (Deemed to be University),
   No.17, Seshadri Road, Gandhinagar, Bengaluru-560 009
   Ph. 9986792670, uma_2265@rediffmail.com Member

7. Mrs. Sowmya R.
   Guest Faculty/Course Co-ordinator,
   School of Social Science and Rural Reconstruction,
   KSRDPRU, Gadag. Ph: 9886725461
   E-mail: sowmya.khushi12@gmail.com Co-ordinator

**IX. BoS (Ad-hoc) in M.Sc. Computer Science (Data Analytics):**

1. Dr. B. L. Muralidhara
   Professor & Co-ordinator, MCA Program,
   Bangalore University, Jnanabharathi Campus,
   Bengaluru- 560056. e-mail: muralidharabl@yahoo.com,
   Ph:9448375854 Chairperson (I/C)

2. Prof. Aziz Makandar
   Chairman, Department of Computer Science,
   Akkamahadevi Women University,
   Jnanashakti Campus, Torvi, Vijayapura – 586108
   Email: azizkswu@gmail.com, Ph: 08352-229009 Member

3. Dr.Shivashankar S.
Department of Computer Applications,
Pavate Nagar, Karnataka University Dharwad- 580003
Email: s_shivashankar@rediffmail.com, Ph: 9448830189 Member

4. Dr. Sanjeevakumar M. Hatture
Associate Professor, Dept. of Computer Science & Engineering
Basaveshwar Engineering College, Bagalkot
Email: smhatture@yahoo.com Ph : 9448959359 Member

5. Dr. S. G. Totad
Professor, Department of Computer Science and Engineering
KLE Technological University, Hubli
Ph: 9490345289 Member

6. Dr. Dayanand G. Savakar
Professor and Director, PG Center
Rani Chennamma University, Vijayapura
Email: dgsavakar@gmail.com Ph: 9448336389 Member

7. Ms. Annapurna N. Solanki
Guest Faculty/Course Co-ordinator
School of Skill and Entrepreneurship Development,
KSRDPRU, Gadag. Co-ordinator

**X. BoS (Ad-hoc) in M.Com:**

1. Prof. S.S. Hugar
Dean, Faculty of Commerce,
Pavate Nagar, Karnatak University,
Dharwad - 580003,
Email: sshugarkud@gmail.com Chairperson (I/c)
2. Shri S. A. Siddhanti
Director (Retd.),
Regional Institute of Co-operative Management (RICM),
No. 67, Padmanashanagar, Banashankari, II Stage,
Bengaluru- 560 070. Member

3. Shri M.I. Ganagi
Chief General Manager, NABARD
#46, NABARD Towers, Kempegowda Road, Bengaluru
Email: bangalorq@nabard.orq, Ph: 9739150762. Member

4. Prof. H.Y. Kamble
Department of Commerce,
Rani Chennamma University,
Vidya Sangama, P B R H - 4, Belagavi - 591156
Email : hykamble@gmail.com Member

5. Prof. P. Laxmana
Department of Commerce,
Davangere University, Davangere - 577002.
Email: drlaxmana2007@gmail.com Ph: 9986617728. Member

6. Prof. A.S. Shiralashetti
   Dean, Department of Commerce,
   Karnatak University,
   Pavate Nagar, Dharwad - 580003
   Email: asshiral@yahoo.com Ph: 9481125216 Member

7. Ms. Neeti Sharma
   Senior Vice President, Team Lease Limited
   6th Floor, BMTC Commercial , 80 Feet Road,
   Koramangala, Bengaluru -560029
   Email: neeti@teamlease.com Ph: 990059 1053 Member

8. Shri Madan Padaki
   CEO& MD of Head Held High Services
   No. 172, 1st Floor, 9th Cross, Indiranagar,
   Bangalore-560038,Email:madan@massentrepreneurship.org
   Ph:9880048400 Member

9. Shri Abhaykumar S. Gasti
   Guest Faculty, School of Skill & Entrepreneurship
   Development, KSRDPRU, Gadag. Co-ordinator

The proposed Boards of Studies as above, are placed before the Executive Council for consideration and approval.

## ನಿರ್ಣಯ

ಜಿಯೋ–ಇನ್‌ಫಾರ್‌ಮೆಟಿಕ್ಸ್ ಅಧ್ಯಯನ ಮಂಡಳಿಗೆ ಸಂಬಂಧಿಸಿದಂತೆ ಅಧ್ಯಕ್ಷರು ಮಾತನಾಡಿ ಅಧ್ಯಯನ ಮಂಡಳಿಯ ಅಧ್ಯಕ್ಷರನ್ನಾಗಿ ಪ್ರಸ್ತಾಪಿಸಿರುವ ಪ್ರೊ. ಪಿ. ಪಿ. ನಾಗೇಶ್ವರ ರಾವ್ ರವರು ಆರೋಗ್ಯದ ಕಾರಣಗಳಿಗಾಗಿ ಲಭ್ಯವಾಗದಿರಬಹುದಾದ್ದರಿಂದ ಅವರ ಸ್ಥಾನದಲ್ಲಿ ಡಾ. ಜಿ. ಬಿ. ಪ್ರಧಾನ್, ಗೌರವ ಪ್ರಾಧ್ಯಾಪಕರು ಅವರನ್ನು ಅಧ್ಯಾಪಕರನ್ನಾಗಿ ನೇಮಕಮಾಡಬಹುದಾಗಿದೆ ಮತ್ತು ಪ್ರೊ. ಪಿ. ಪಿ. ನಾಗೇಶ್ವರ ರಾವ್ ಒಬ್ಬ ಸದಸ್ಯರಾಗಿ ಮುಂದುವರಿಯಬಹುದೆಂದು ತಿಳಿಸಿದರು.

ಪ್ರೊ. ಆರ್. ಎಸ್. ದೇಶಪಾಂಡೆ ಅವರು ಮಾತನಾಡಿ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯಲ್ಲಿ ಡಾ. ಎಂ. ಹೆಚ್. ಉಮಾ, ಸಹಪ್ರಾಧ್ಯಾಪಕರು ಅವರ ಸ್ಥಾನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಬಿರಾದಾರ್ ಅವರನ್ನು ಸೇರಿಸಲು ಸಲಹೆ ಮಾಡಿದರು.

ಡಾ. ಅರುಣ ಪಾಟೀಲ್ ಅವರು ಮಾತನಾಡಿ ಸಾರ್ವಜನಿಕ ಆರೋಗ್ಯ (ಎಂ.ಪಿ.ಹೆಚ್) ಅಧ್ಯಯನ ಮಂಡಳಿಗೆ ದೈಹಿಕ, ಮಾನಸಿಕ ಹಾಗೂ ಅಂದ ವಿದ್ಯಾರ್ಥಿಗಳ ಸೇವೆ ಸಲ್ಲಿಸುತ್ತಿರುವ ಬಿ. ಡಿ. ತತ್ತಿ ಮೆಮೊರಿಯಲ್ ಚಾರಿಟೆಬಲ್ ಟ್ರಸ್ಟ್, ಲಕ್ಷ್ಮೇಶ್ವರ ಇದರ ಗೌರವ ಕಾರ್ಯದರ್ಶಿಗಳಾದ ಶ್ರೀ ಸೋಮನಾಥ ಮಹಾಜನಶೆಟ್ಟರ ಅವರನ್ನು ಸೇರಿಸಲು ಸಲಹೆ ಮಾಡಿದರು.

ಶ್ರೀಮತಿ ಎನ್. ಜಮುನಾ ಅರಸ್ ಅವರು ಮಾತನಾಡಿ ಎಂ.ಪಿ.ಹೆಚ್ ಕೋರ್ಸ್‌ನ ಶೈಕ್ಷಣಿಕ ಉದ್ದೇಶಗಳಿಗಾಗಿ ಬೆಂಗಳೂರು ಲಿಂಗರಾಜಪುರಂನಲ್ಲಿರುವ ವಿಕಲಚೇತನ ಜನರ ಸಂಘ (ಎಪಿಡಿ)ದೊಂದಿಗೆ ಸಹಯೋಗ ಹೊಂದಲು ಸಲಹೆ ಮಾಡಿದರು.

ಮೇಲಿನ ಸಲಹೆಗಳೊಂದಿಗೆ 2019–20ನೇ ಶೈಕ್ಷಣಿಕ ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ ಅದರಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ, ಕಾರ್ಯಸೂಚಿಯಲ್ಲಿ ಪ್ರಸ್ತಾಪಿಸಲಾಗಿರುವ ಹಂಗಾಮಿ ಅಧ್ಯಯನ ಮಂಡಳಿಗಳನ್ನು ರಚಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

## RESOLUTION

The Chairman said that in the proposed BoS in Geoinformatics Prof. P.P. Nageshwara Rao, who is proposed to be nominated as Chairperson may not be available because of his health reasons. Therefore, in his place, Dr. J.B. Pradhan, Hon. Professor, may be nominated as Chairman of the BoS and Prof. P.P. Nageshwara Rao will be one of the Members.

Prof. R.S. Deshpande suggested for inclusion of Prof. Biradar from Karnatak University, in place of Dr. M.H. Uma, Associate Professor in the BoS in Economics.

Dr. Arun Patil suggested for inclusion of Shri Somanath Mahajanshettar, Hon. Secretary, B.D. Tatti Memorial Charitable Trust, Lakshmeshwara, in the proposed BoS in M.P.H. as this Trust is serving the cause of physically, mentally and visually impaired students.

Smt. N. Jamuna Urs suggested for collaboration with the Association of People with Disability (APD) India, Lingarajapuram, Bengaluru, as it would help in M.P.H. Course.

With the above suggestions, the Executive Council resolved to approve the proposed panel of experts for constitution of respective Adhoc Boards of Studies as detailed in the agenda for the academic year 2019-20 or until further orders whichever is later.

**ವಿಷಯ ಸಂಖ್ಯೆ 7: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ (ಎನ್.ಎಸ್.ಎಸ್.) ಘಟಕವನ್ನು ತೆರೆಯುವ ಬಗ್ಗೆ.**

**Subject No. 7 : Opening of National Service Scheme (NSS) Unit in KSRDPR University, Gadag – reg.**

**ಪರಾಮರ್ಶನ ಟಿಪ್ಪಣಿ:**

ಹಿನ್ನೆಲೆ: ರಾಷ್ಟ್ರೀಯ ಸೇವಾ ಯೋಜನೆ(ಎನ್.ಎಸ್.ಎಸ್.) ಒಂದು ಸ್ವಯಂಪ್ರೇರಿತ ಹಾಗೂ ಮೌಲ್ಯಾಧಾರಿತ ಯುವ ವಿದ್ಯಾರ್ಥಿಗಳ ಕಾರ್ಯಕ್ರಮವಾಗಿದ್ದು, ಯುವಜನ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯ ನಿರ್ವಹಿಸುವ ಒಂದು ಮಹತ್ವದ ಯುವಜನರ ಯೋಜನೆಯಾಗಿದೆ. ಈ ಯೋಜನೆಯನ್ನು ಸ್ವಯಂಪ್ರೇರಿತ ಸಮುದಾಯ ಸೇವೆಯ ಮೂಲಕ ಯುವ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ಅಭಿವೃದ್ಧಿ ಮತ್ತು ನಡತೆಯನ್ನು ಅಭಿವೃದ್ಧಿಗೊಳಿಸುವ ಮೂಲ ಉದ್ದೇಶದಿಂದ ಪ್ರಾರಂಭಿಸಲಾಯಿತು. ಇದನ್ನು ಮಹಾತ್ಮಾ ಗಾಂಧೀಜಿಯವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ದಿನಾಂಕ 24 ಸೆಪ್ಟೆಂಬರ್ 1969 ರಂದು 40,000 ವಿದ್ಯಾರ್ಥಿಗಳನ್ನೊಳಗಂಡು ದೇಶದ 37 ವಿಶ್ವವಿದ್ಯಾಲಯಗಳಲ್ಲಿ ಪ್ರಾರಂಭಿಸಲಾಯಿತು. ರಾಷ್ಟ್ರೀಯ ಸೇವಾ ಯೋಜನೆ ಅಸ್ಥಿತ್ವಕ್ಕೆ ಬಂದಾಗಿನಿಂದ ಮಾರ್ಚ್ 2018 ರವರೆಗೆ ಎನ್.ಎಸ್.ಎಸ್. ವಿದ್ಯಾರ್ಥಿಗಳ ಸಂಖ್ಯೆ 40,000 ರಿಂದ 3.8 ಮಿಲಿಯನ್‌ಗೆ ಹೆಚ್ಚಾಗಿದೆ. ವಿಶ್ವವಿದ್ಯಾಲಯಗಳ, ಕಾಲೇಜುಗಳ ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ಹಲವಾರು ಸಮುದಾಯ ಸೇವಾ ಯೋಜನೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಗುರಿ ಮತ್ತು ಉದ್ದೇಶಗಳು: ಎನ್.ಎಸ್.ಎಸ್. ನ ಗುರಿ ಮತ್ತು ಉದ್ದೇಶಗಳೆಂದರೆ: (i) ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವಾಗಲೇ ಸಮುದಾಯ ಸೇವೆ ಸಲ್ಲಿಸುವುದು; (ii) ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಆತ್ಮ ಸಾಕ್ಷಿಯನ್ನು ಹುಟ್ಟು ಹಾಕುವುದು; (iii) ಶಿಕ್ಷಣ ಸಂಸ್ಥೆಗಳ ಸುತ್ತಮುತ್ತಲಿನ ಸಮುದಾಯಗಳೊಂದಿಗೆ

ಜನರೊಂದಿಗೆ ಕೆಲಸ ಮಾಡುವುದು; (ಆ) ಸೃಜನಾತ್ಮಕ ಮತ್ತು ರಚನಾತ್ಮಕ ಸಮಾಜ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು; (ಇ) ಸಮುದಾಯದೊಂದಿಗೆ ವಾಸ್ತವವಾಗಿ ಮುಖಾಮುಖಿಯಾಗಿ ಬೆರೆತು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದು; (ಈ) ತರಗತಿಯಲ್ಲಿ ಪಡೆದ ಜ್ಞಾನವನ್ನು ಪ್ರಾಯೋಗಿಕವಾಗಿ ಕೆಲವಾದರೂ ಸಾಮಾಜಿಕ ಸಮಸ್ಯೆಗಳನ್ನು ತಗ್ಗಿಸುವುದು; ಮತ್ತು (ಉ) ಸ್ವಯಂ-ಉದ್ಯೋಗಿಗಳಾಗಲು ಅಗತ್ಯವಾದ ಕೌಶಲ್ಯಗಳನ್ನು ಅಭಿವೃದ್ಧಿಗೊಳಿಸಿಕೊಳ್ಳುವುದು. ಅಲ್ಲದೆ ವ್ಯಕ್ತಿತ್ವ ಬೆಳವಣಿಗೆ, ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುವುದು, ರಾಷ್ಟ್ರೀಯ ದೃಷ್ಟಿಕೋನ ಮತ್ತು ನಾಗರಿಕ ಜವಾಬ್ದಾರಿಗಳನ್ನು ಹೊಂದುವುದು ಇದರ ಗುರಿಗಳಾಗಿವೆ.

ಭಾರತ ಸರ್ಕಾರದ ಯುವಜನ ವ್ಯವಹಾರಗಳ ಮತ್ತು ಕ್ರೀಡಾ ಮಂತ್ರಾಲಯದ ಎನ್.ಎಸ್.ಎಸ್. ಪ್ರಾದೇಶಿಕ ನಿರ್ದೇಶಕರು ಪತ್ರ ಸಂಖ್ಯೆ: F No. 22/NSS/KAR/SFUs/2019-20/204-205, ದಿನಾಂಕ 11-09-2019 ರಲ್ಲಿ ಸದರಿ ಮಂತ್ರಾಲಯದ ನಿಯಮ ಮತ್ತು ಷರತ್ತುಗಳನುಸಾರ ನಮ್ಮ ವಿಶ್ವವಿದ್ಯಾಲಯದಲ್ಲಿ 200 ಎನ್.ಎಸ್.ಎಸ್. ಸ್ವಯಂ ಸೇವಕರ ಒಂದು ಸ್ವ-ಹಣಕಾಸು ಘಟಕವನ್ನು ಪ್ರಾರಂಭಿಸಲು ಅನುಮತಿ ನೀಡಿ 2019-20ನೇ ಸಾಲಿನಿಂದ ಸ್ವಯಂ ಸೇವಕರನ್ನು ನೋಂದಣಿ ಮಾಡುವುದರ ಮೂಲಕ ಎನ್.ಎಸ್.ಎಸ್. ಚಟುವಟಿಕೆಗಳನ್ನು ಪ್ರಾರಂಭಿಸಲು ಸಲಹೆ ನೀಡಿರುತ್ತಾರೆ.

ಸ್ವ-ಹಣಕಾಸು ಘಟಕಗಳ ಕಾರ್ಯಚರಣೆಯ ಮಾರ್ಗಸೂಚಿಗಳನುಸಾರ ಅಂತಹ ಸಂಸ್ಥೆಗಳು ಘಟಕಗಳನ್ನು ನಡೆಸಲು ಬೇಕಾದ ಸಂಪನ್ಮೂಲಗಳನ್ನು ತಾವೇ ಸ್ವತ: ಕ್ರೋಢೀಕರಿಸಿಕೊಳ್ಳಬೇಕಾಗಿದೆ. ಅಗತ್ಯವಿದ್ದರೆ ಎನ್.ಎಸ್.ಎಸ್. ಕಾರ್ಯಕ್ರಮ ಚಟುವಟಿಕೆಗಳಿಗೆ ವಿದ್ಯಾರ್ಥಿಗಳಿಂದ ಅತ್ಯಲ್ಪ ಶುಲ್ಕವನ್ನು ಪಡೆಯಬಹುದಾಗಿದೆ. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿ.ಎಸ್.ಆರ್) ಮೂಲಕವೂ ಸಾಂಸ್ಥಿಕ ಸಂಸ್ಥೆಗಳಿಂದ ನೆರವನ್ನು ಪಡೆಯಬಹುದಾಗಿದೆ. ಅಂತಹ ಶಿಕ್ಷಣ ಸಂಸ್ಥೆಗಳು ಹಣಕಾಸು ನಿಯಮಗಳನ್ನು ಪಾಲಿಸುವುದರೊಂದಿಗೆ ಎನ್.ಎಸ್.ಎಸ್. ಲೆಕ್ಕಪತ್ರ ವಿಧಾನಗಳನ್ನು ಅನುಸರಿಸಬೇಕಾಗುತ್ತದೆ.

ವಿಶ್ವವಿದ್ಯಾಲಯದಲ್ಲಿ ಡಾ: ವೀರೇಶ್ ಕುಮಾರ್ ಅವರನ್ನು ದೈಹಿಕ ಶಿಕ್ಷಣ ಸಹಾಯಕ ನಿರ್ದೇಶಕರಾಗಿ ತಾತ್ಕಾಲಿಕವಾಗಿ ನೇಮಕಮಾಡಲಾಗಿದೆ. ಇವರು ಎನ್.ಎಸ್.ಎಸ್. ಕಾರ್ಯಕ್ರಮಗಳನ್ನೂ ಸಹ ಸಮನ್ವಯಗೊಳಿಸುತ್ತಾರೆ.

ಮೇಲಿನ ಮಾಹಿತಿಯೊಂದಿಗೆ 2019-20ನೇ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ ಒಂದು ಸ್ವ-ಹಣಕಾಸು ಎನ್.ಎಸ್.ಎಸ್. ಘಟಕವನ್ನು ತೆರೆಯುವ ಹಾಗೂ ವಿಶ್ವವಿದ್ಯಾಲಯದಿಂದ ಸದರಿ ಘಟಕದ ಕಾರ್ಯಚಟುವಟಿಕೆಗಳ ವೆಚ್ಚವನ್ನು ಭರಿಸುವ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**Reference Note:**

**Background:** The National Service Scheme (NSS), a voluntary and value based student youth programme, is one of the major youth schemes being operated by the Ministry of Youth Affairs & Sports. The Scheme was launched with the primary objective of developing personality and character of the student youth through voluntary community service. It was launched on 24th September 1969, during the birth centenary celebration of Mahatma Gandhi, in 37 Universities involving 40,000 students. Since inception of the NSS, the students strength has increased from 40,000 to over 3.8 million up to the end of March 2018. The students in various universities, colleges and Institutions of higher learning have volunteered to take part in various community service programmes.

**Aims & Objectives:** The aims and objectives of the NSS are: (i) to render service to the community while studying in an educational institution; (ii) to arouse the social conscience among students; (iii) to provide them with an opportunity to work creatively and constructively with the community around the educational campus; and (iv) to put the education they receive to concrete social use; and specifically, (i) to work among the people; (ii) to engage in creative and constructive social action; (iii) to enhance knowledge

of oneself and the community through a face-to-face with reality; (iv) to use the knowledge gained in the classroom in a practical way for mitigating at least some of the social problems; and (v) to gain skills in programme development to be able to be self-employed. The goals are to achieve improvement in personality, leadership qualities, national outlook and a sense of civic responsibility.

The Regional Director, NSS, Ministry of Youth Affairs & Sports, Govt. of India, Bengaluru, has, vide letter F. No. 22/NSS/KAR/SFUs/2019-20/204-205, dated 11.09.2019, accorded permission for opening of a Self-Financing N.S.S. Unit (SFU) consisting of 200 N.S.S. Volunteers in our University as per the terms and conditions of SFU guidelines laid down by the Ministry of Youth Affairs and Sports and the University has been advised to enrol NSS volunteers and start the NSS activities from the current year 2019-20. A copy of the **Operational Guidelines for SFUs of NSS** is enclosed herewith for kind reference.

As regards, financial implications, it is submitted that as per the Operational Guidelines, the institutions setting up the SFUs should raise necessary resources for running of the NSS Unit on their own. Such institutions, could, if necessary, charge a nominal fee for NSS programme activities. Funds could also be mobilised through CSR activities of corporate sector. Funds could be mobilised from any other legitimate source as well. Such institutions shall follow the financial norms and accounting procedures of NSS, as applicable to other NSS units.

It is submitted that Dr. Veeresh Kumar, who has been appointed as Assistant Director of Physical Education on temporary basis will coordinate the NSS activities in the University.

With the above information, the matter of opening a Self-Financing Unit (SFU) of NSS in KSRDPR University, Gadag, from the academic year 2019-20 and to bear the expenses of the said unit activities for the University, is placed before the Executive Council for consideration and approval.

**ನಿರ್ಣಯ**

ಡಾ. ಜಿ. ಬಿ. ಶಿವರಾಜು ಅವರು ವಿಷಯದ ಬಗ್ಗೆ ಮಾತನಾಡುತ್ತಾ, ರಾಷ್ಟ್ರೀಯ ಸೇವಾ ಯೋಜನೆಯನ್ನು ವಿಶ್ವವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಬೇಕು ಹಾಗೂ ಈ ಚಟುವಟಿಕೆಗಳಿಗೆ ವಿದ್ಯಾರ್ಥಿಗಳಿಂದ ತಲಾ ರೂ. 50–00 ರಂತೆ ಶುಲ್ಕವನ್ನು ಪಡೆಯಬಹುದು ಎಂದು ಸಲಹೆ ಮಾಡಿದರು. ಅಧ್ಯಕ್ಷರು ಉತ್ತರಿಸಿ ಎನ್.ಎಸ್.ಎಸ್ ಚಟುವಟಿಕೆಗಳನ್ನು ಎಲ್ಲಾ ಕೋರ್ಸ್‌ಗಳ ಒಂದು ಭಾಗವಾಗಿರುವ ಗ್ರಾಮೀಣ ವಾಸ್ತವ್ಯ ಕಾರ್ಯಕ್ರಮಗಳ (Village Immersion Programmes) ಜತೆ ಸೇರಿಸಲಾಗುವುದು ಎಂದು ತಿಳಿಸಿದರು.

ಮೇಲಿನ ಚರ್ಚೆಯೊಂದಿಗೆ ಕೇಂದ್ರ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯದ ಎನ್.ಎಸ್.ಎಸ್. ಪ್ರಾದೇಶಿಕ ನಿರ್ದೇಶಕರಿಂದ ಮಂಜೂರಾಗಿರುವ ಸ್ವ–ಹಣಕಾಸು ಘಟಕವನ್ನು ವಿಶ್ವವಿದ್ಯಾಲಯದಲ್ಲಿ 2019–20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸುವ ಪ್ರಸ್ತಾವನೆಯನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

## RESOLUTION

Speaking on the subject, Dr. G.B. Shivaraju suggested for making NSS compulsory for all the students of the University and to collect Rs. 50/- each from all the students towards NSS activities. The Chairman informed that the NSS activities will be clubbed with the students' village immersion programmes, which are part of academic programmes of all the courses. With the above suggestions, the Executive Council resolved to approve the proposal of opening NSS Self-financing unit in the University from the academic year 2019-20 as sanctioned by the Regional Director, NSS, Ministry of Youth Affairs & Sports, Govt. of India, Bengaluru.

**ವಿಷಯ ಸಂಖ್ಯೆ 8: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್‌ಗೆ ಹೊಂದಿಕೊಂಡಿರುವ ಗದಗ ತಾಲ್ಲೂಕು ಮಲ್ಲಸಮುದ್ರ ಗ್ರಾಮದ ರಿ.ಸ. ನಂ. 32, 37, 38 ಮತ್ತು 39 ನೇದ್ದರ ಜಮೀನುಗಳನ್ನು ಹೆಚ್ಚುವರಿಯಾಗಿ ಖರೀದಿ ಮಾಡುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ**

1. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ನಿರ್ಮಾಣ ಮಾಡಲು ಗದಗ ತಾಲ್ಲೂಕಿನ ನಾಗಾವಿ, ಕಳಸಾಪೂರ ಮತ್ತು ಮಲ್ಲ ಸಮುದ್ರ ಗ್ರಾಮಗಳ ವಿವಿಧ ಸರ್ವೆ ನಂಬರುಗಳಲ್ಲಿ 353.12 ಎಕರೆ ಜಮೀನನ್ನು ಗುರುತಿಸಲಾಗಿದೆ. ಇದರ ಪೈಕಿ ಸುಮಾರು 300 ಎಕರೆ ಜಮೀನನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರ ಮಾಡಲಾಗಿದೆ. ಹೊಸ ಕ್ಯಾಂಪಸ್‌ನಲ್ಲಿ ಈಗಾಗಲೇ ಐದು ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ.

2. ಈಗಾಗಲೇ ನಿಗದಿಪಡಿಸಿದ ಜಮೀನುಗಳಿಗೆ ದಿನಾಂಕ 23–05–2017 ರಂದು ಭೇಟಿ ನೀಡಿ ಪರಿಶೀಲಿಸಿದಾಗ ಸದರಿ ಜಮೀನುಗಳಿಗೆ ಗದಗಿನಿಂದ ನಾಗಾವಿ ಗ್ರಾಮದ ಮೂಲಕ ಶಿರಹಟ್ಟಿಗೆ ಹೋಗುವ ಜಿಲ್ಲಾ ಮುಖ್ಯರಸ್ತೆಯಿಂದ ನೇರ ಸಂಪರ್ಕವು ಇಲ್ಲದಿರುವುದನ್ನು ಗಮನಿಸಲಾಯಿತು. ಹೀಗೆ ನೇರ ಸಂಪರ್ಕವಿಲ್ಲದಿದ್ದರೆ ವಿಶ್ವವಿದ್ಯಾಲಯಕ್ಕೆ ಸದರಿ ಮುಖ್ಯ ರಸ್ತೆಯಿಂದ ಪ್ರವೇಶಮಾಡಲು ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಅನಾನುಕೂಲವಾಗುತ್ತದೆ. ಮೇಲಾಗಿ ತರಬೇತಿ ಹಾಗೂ ಮಾಹಿತಿ ಒದಗಿಸಲು ಹಲವು ಕಟ್ಟಡಗಳನ್ನು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಬೇಕಾಗಿರುವುದರಿಂದ ರಸ್ತೆಗೆ ಹೊಂದಿಕೊಂಡಿರುವ ಜಮೀನಿನ ಅವಶ್ಯಕತೆ ಕಂಡುಬಂದು ಗುರುತಿಸಲಾಯಿತು. ಈಗಾಗಲೇ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳು ಈ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಜಮೀನುಗಳ ಹಿಂಬಾಗದಲ್ಲಿರುವುದರಿಂದ ಸದರಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಜಮೀನಿನಲ್ಲಿ ಮುಂಬರುವ ದಿನಗಳಲ್ಲಿ ಯಾವುದಾದರೂ ಎತ್ತರದ ಖಾಸಗಿ ಕಟ್ಟಡಗಳು, ಮುಂತಾದವುಗಳನ್ನು ನಿರ್ಮಿಸಿದರೆ ವಿಶ್ವವಿದ್ಯಾಲಯದ ದೃಶ್ಯತೆಗೆ

ಕುಂದುಂಟಾಗುವ ಎಲ್ಲಾ ಸಾಧ್ಯತೆಗಳು ಇರುತ್ತದೆ. ಆದುದರಿಂದ ಈಗಾಗಲೇ ವಿಶ್ವವಿದ್ಯಾಲಯಕ್ಕೆ ನೀಡಿದ / ಗೊತ್ತುಪಡಿಸಿದ ಜಮೀನುಗಳಿಗೆ ಹೊಂದಿಕೊಂಡು ಇರುವ ಮಲ್ಲಸಮುದ್ರ ಗ್ರಾಮದ ರಿಸನಂ. 32, 37, 38 ಮತ್ತು 39 ರ ಒಟ್ಟು 56ಎ 32ಗು ಜಮೀನುಗಳು ಸಹ ಪ್ರಸ್ತಾಪಿತ ವಿಶ್ವವಿದ್ಯಾಲಯಕ್ಕೆ ಸೂಕ್ತವಾದ ಸ್ಥಳವಾಗಿರುತ್ತವೆ ಹಾಗೂ ಸದರಿ ಜಮೀನುಗಳು ಪ್ರಸ್ತಾಪಿತ ಉದ್ದೇಶಕ್ಕೆ ಅವಶ್ಯವಾಗಿರುತ್ತದೆ. ಹಾಗಾಗಿ ಈ ಜಮೀನುಗಳನ್ನು ವಿಶ್ವವಿದ್ಯಾಲಯಕ್ಕೆ ಕೊಡಿಸಬೇಕೆಂದು ಅಂದಿನ ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಇವರನ್ನು ಕೋರಿ ಮುಂದಿನ ಕ್ರಮಕ್ಕೈಗೊಳ್ಳುವಂತೆ ಸೂಚನೆ ನೀಡಲು ವಿನಂತಿಸಲಾಗಿತ್ತು.

3. ಅದರಂತೆ ದಿನಾಂಕ 23–05–2017 ರಂದು ಈ ಪ್ರಸ್ತಾವನೆಯನ್ನು ಅಂದಿನ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಮತ್ತು ಗದಗ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಸದರಿ ಹೆಚ್ಚುವರಿ ಜಮೀನುಗಳನ್ನು ಖರೀದಿಸಿ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಬೇಕೆಂದು ಕೋರಿದಂತೆ, ಸದರಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳು, ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರಿಗೆ ಹೆಚ್ಚುವರಿ ರೂ. 25.00 ಕೋಟಿ ಅನುದಾನವನ್ನು ಬಿಡುಗಡೆಮಾಡಲು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

4. ಆದರೆ, ಸರ್ಕಾರ ದಿನಾಂಕ 18-07-2018ರ ಪತ್ರದಲ್ಲಿ ಈಗಾಗಲೇ ಗುರುತಿಸಿರುವ ಜಮೀನಿನಲ್ಲಿ ಅಗತ್ಯ ಕಟ್ಟಡ ಸೌಕರ್ಯಗಳನ್ನು ಕಲ್ಪಿಸಿಕೊಂಡು ಕ್ರಮವಹಿಸುವಂತೆ ತಿಳಿಸಿ ಹೆಚ್ಚುವರಿಯಾಗಿ ಭೂಮಿ ಖರೀದಿಸುವ ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ತಿರಸ್ಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

5. ಮುಂದುವರೆದು, ಗದಗ ತಹಶೀಲ್ದಾರರು ತಮ್ಮ ಪತ್ರ ದಿನಾಂಕ 29-08-2019ರಲ್ಲಿ ಮಲ್ಲಸಮುದ್ರ ಗ್ರಾಮದ ರಿಸನಂ. 38 ಮತ್ತು 39ರ ಜಮೀನುಗಳನ್ನು ಕೃಷಿಯಿಂದ ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ಪ್ರಸ್ತಾಪಿತ ಜಮೀನಿನ ಮಾಲಿಕರು ಅನ್‌ಲೈನ್ ತಂತ್ರಾಂಶದ ಮೂಲಕ ಸಕಾಲದಲ್ಲಿ ಅರ್ಜಿ ಸಲ್ಲಿಸಿರುತ್ತಾರೆಂದು ತಿಳಿಸಿ, ಮೇಲ್ಕಾಣಿಸಿದ ಜಮೀನುಗಳನ್ನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿಯಾಗಿ ಖರೀದಿಸಲಾಗುತ್ತದೆಯೇ ಎಂಬುದಕ್ಕೆ ವಿಶ್ವವಿದ್ಯಾಲಯದ ಅಭಿಪ್ರಾಯವನ್ನು ಸಲ್ಲಿಸಲು ಕೋರಿದ್ದಾರೆ. ವಿಶ್ವವಿದ್ಯಾಲಯ ತಹಶೀಲ್ದಾರರಿಗೆ ದಿನಾಂಕ 09-10-2019 ರಂದು ಪತ್ರ ಬರೆದು ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ ಸಭೆಯಲ್ಲಿ ಚರ್ಚಿಸಿ ಅಭಿಪ್ರಾಯವನ್ನು ತಿಳಿಸುವುದಾಗಿ ಹಾಗೂ ಅಲ್ಲಿಯವರೆಗೆ ಈ ವಿಷಯದಲ್ಲಿ ಯಾವುದೇ ಕ್ರಮ ಕೈಗೊಳ್ಳಬಾರದೆಂದು ಕೋರಲಾಗಿದೆ. ಸದರಿ ರಿಸನಂ. 38 ಮತ್ತು 39 ರಲ್ಲಿ ಒಟ್ಟು 20ಎ 38ಗು ಜಮೀನಿರುತ್ತದೆ.

6. ಮೇಲಿನ ಕಂಡಿಕೆ 2 ರಲ್ಲಿ ವಿವರಿಸಿರುವ ಕಾರಣಗಳಿಗಾಗಿ ಮಲ್ಲಸಮುದ್ರ ಗ್ರಾಮದ ಜಮೀನುಗಳನ್ನು (ಸನಂ. 32, 37, 38 ಮತ್ತು 39) ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣಕ್ಕಾಗಿ ಅಗತ್ಯವಾಗಿರುವುದರಿಂದ ಮತ್ತೊಮ್ಮೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಹೆಚ್ಚುವರಿ ಜಮೀನುಗಳನ್ನು ಖರೀದಿಸಿ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲು ಕೋರಬಹುದೇ ಎಂಬ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ನಿರ್ಣಯಕ್ಕೆ ಮಂಡಿಸಲಾಗಿದೆ.

## ನಿರ್ಣಯ

ಸಭೆಯ ಪ್ರಾರಂಭದ ಮುನ್ನ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ಗೆ ಭೇಟಿ ನೀಡಿ, ಅಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಮತ್ತು ಮಲ್ಲಸಮುದ್ರ ಗ್ರಾಮದ ಸರ್ವೇ ನಂ 32, 37, 38 ಮತ್ತು 39 ರ ಜಮೀನುಗಳನ್ನು ಸ್ಥಳ ಪರಿಶೀಲಿಸಿ, ಸದರಿ ಜಮೀನುಗಳನ್ನು ಹೆಚ್ಚುವರಿಯಾಗಿ ಖರೀದಿಸುವ ಅಗತ್ಯತೆಯನ್ನು ಮನಗಂಡಿತು. ಪ್ರಸ್ತುತ ನಡೆಯುತ್ತಿರುವ ಕಾಮಗಾರಿಗಳ ಬಗ್ಗೆ ಸದಸ್ಯರು ತೃಪ್ತಿ ವ್ಯಕ್ತಪಡಿಸಿದರು. ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ, ವಿಶ್ವವಿದ್ಯಾಲಯದ ಭವಿಷ್ಯದ ಅಭಿವೃದ್ಧಿಯ ದೃಷ್ಟಿಯಿಂದ ಈ ಜಮೀನುಗಳನ್ನು ಹೆಚ್ಚುವರಿಯಾಗಿ ಖರೀದಿಸುವ ಬಗ್ಗೆ ವಿಶ್ವವಿದ್ಯಾಲಯದ ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಲು ಹಾಗೂ ಅಗತ್ಯವಾದ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ಪುನರ್ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು. ಸದರಿ ಜಮೀನುಗಳಿಲ್ಲದೇ ವಿಶ್ವವಿದ್ಯಾಲಯ ಕಟ್ಟಡಗಳ ಕ್ಯಾಂಪಸ್‌ನ ಚಿತ್ರಸೃದೃಷ್ಯತೆ ಹಾಳಾಗುವುದರ ಜೊತೆಗೆ ಕ್ಯಾಂಪಸ್‌ನ ಪ್ರವೇಶಕ್ಕೆ ಸರಿಯಾದ ರಸ್ತೆಗಳು ಇಲ್ಲದಂತಾಗುತ್ತದೆ ಎಂದು ಸದಸ್ಯರು ಅಭಿಪ್ರಾಯಪಟ್ಟರು.

## RESOLUTION

The Members of the Executive Council had visited the new campus in the morning and had observed the need and necessity of procuring the proposed additional land. They also observed the ongoing works in the Campus and expressed their satisfaction about the same.

The Executive Council discussed the necessity of the lands in Sy. Nos. 32, 37, 38, and 39 of Mallasamudra village in the interest of future development of the University, and resolved to request the State Government to reconsider the University's proposal for procuring the said additional lands for the University and for sanction of additional grants as requested. The Executive Council also felt that without these lands, the front view of the University Campus would be lost and there will not be proper approach roads to the campus.

ವಿಷಯ ಸಂಖ್ಯೆ 9 : ವಿನಿಯಮಗಳು ಮತ್ತು ಪರ್ಯಾದೇಶಗಳಿಗೆ ಕುಲಾಧಿಪತಿಗಳಿಂದ ಅನುಮೋದನೆ ಆಗಿರುವ ಬಗ್ಗೆ ಮಾಹಿತಿ.

**Approval of Regulations and Ordinances by the Chancellor – reg.**

<u>ಪರಾಮರ್ಶನ ಟಿಪ್ಪಣಿ</u>

ಕಾರ್ಯನಿರ್ವಾಹಕ ಪರಿಷತ್ತು ಮತ್ತು ಶೈಕ್ಷಣಿಕ ಪರಿಷತ್ತಿನ ಅನುಮೋದನೆಯೊಂದಿಗೆ ರಾಜ್ಯ ಸರ್ಕಾರದ ಮೂಲಕ ಮಾನ್ಯ ರಾಜ್ಯಪಾಲರ/ ಕುಲಾಧಿಪತಿಗಳಿಗೆ ಸಲ್ಲಿಸಿದ್ದ ಈ ಕೆಳಕಂಡ ವಿನಿಯಮ / ಪರ್ಯಾದೇಶಗಳಿಗೆ ಮಾನ್ಯ ಕುಲಾಧಿಪತಿಗಳು ದಿನಾಂಕ 03-08-2019, 20-08-2019, 21-08-2019 ಮತ್ತು 27-08-2019 ರಂದು ಅನುಮೋದನೆ ನೀಡಿದ್ದಾರೆ. ಒಂದು ವಿನಿಯಮ ಮತ್ತು ಒಂದು ನಿಯಮಾವಳಿಗೆ ಇನ್ನೂ ಅನುಮೋದನೆ ನಿರೀಕ್ಷಿಸಲಾಗಿದೆ. (ವಿವರಗಳನ್ನು ಕೆಳಗೆ ಕೊಡಲಾಗಿದೆ)

ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಗಮನಕ್ಕೆ ಮಂಡಿಸಲಾಗಿದೆ.

**Reference Note:**

The following Regulations/Ordinances approved by the Executive Council and the Academic Council and submitted to the Hon'ble Governor / Chancellor of the University through the State Government have been approved by the Chancellor on 03/08/2019, 20/08/2019, 21/08/2019 and 27/08/2019.

**REGULATIONS:**

1. 'REGULATIONS GOVERNING THE APPOINTMENT AND PROMOTION OF TEACHERS AND OTHER ACADEMIC STAFF IN THE KARNATAKA STATE RURAL DEVELOPMENT AND PANCHAYAT RAJ UNIVERSITY, GADAG AND ITS REGIONAL CENTRES, 2019 AS PER THE UGC REGULATIONS OF 2018'.

2. 'THE KARNATAKA STATE RURAL DEVELOPMENT AND PANCHAYAT RAJ UNIVERSITY APPOINTMENT, POWERS, FUNCTIONS AND CONDITIONS OF SERVICE OF THE DIRECTOR OF TRAINING, PUBLICATION & SUPERVISION REGULATIONS, 2019'.

3. 'THE KARNATAKA STATE RURAL DEVELOPMENT AND PANCHAYAT RAJ UNIVERSITY APPOINTMENT, POWERS, FUNCTIONS AND CONDITIONS OF SERVICE OF THE DIRECTOR OF RESEARCH, INNOVATION AND EVALUATION REGULATIONS, 2019'.

4. 'THE KARNATAKA STATE RURAL DEVELOPMENT AND PANCHAYAT RAJ UNIVERSITY TEACHERS' SENIORITY REGULATIONS, 2019'.

5. 'THE KARNATAKA STATE RURAL DEVELOPMENT AND PANCHAYAT RAJ UNIVERSITY CONVOCATION FOR CONFERRING DEGREES REGULATIONS, 2019'.

6. 'THE KARNATAKA STATE RURAL DEVELOPMENT AND PANCHAYAT RAJ UNIVERSITY INSTITUTION OF ENDOWMENTS, FELLOWSHIPS, TRAVELING FELLOWSHIPS, SCHOLARSHIPS, RESEARCH SCHOLARSHIPS, EXHIBITIONS, STIPENDS, MEDALS AND PRIZES REGULATIONS, 2019'.

7. 'THE KARNATAKA STATE RURAL DEVELOPMENT AND PANCHAYAT RAJ UNIVERSITY (ARRANGEMENTS FOR TRANSPORT, FOOD AND ACCOMMODATION TO UNIVERSITY STUDENTS DURING FIELD VISITS / PROJECT WORK / INTERNSHIP) REGULATIONS, 2019'.

8. 'THE KARNATAKA STATE RURAL DEVELOPMENT AND PANCHAYAT RAJ UNIVERSITY (ESTABLISHMENT AND FUNCTIONS OF CENTRALIZED PLACEMENT CELL) REGULATIONS, 2019'.

9. 'THE KARNATAKA STATE RURAL DEVELOPMENT AND PANCHAYAT RAJ UNIVERSITY (CONSTITUTION OF STANDING COMMITTEE AND APPOINTMENT OF AD-HOC COMMITTEES) REGULATIONS, 2019'.

10. 'THE KARNATAKA STATE RURAL DEVELOPMENT AND PANCHAYAT RAJ UNIVERSITY CONSTITUTION, POWERS AND FUNCTIONS OF LIBRARY COMMITTEE REGULATIONS, 2019'.

11. 'REGULATIONS RELATING TO THE MANNER OF CONDUCTING INTERVIEW FOR APPOINTMENT AND PROMOTION OF TEACHERS AND OTHER ACADEMIC STAFFS IN THE KARNATAKA STATE RURAL DEVELOPMENT AND PANCHAYAT RAJ UNIVERSITY, 2019'.

12. 'KARNATAKA STATE RURAL DEVELOPMENT AND PANCHAYAT RAJ UNIVERSITY AWARD OF HONORARY DEGREES OR ACADEMIC DISTINCTIONS AT THE ANNUAL CONVOCATIONS REGULATIONS, 2019.

**ORDINANCE:**

'THE KARNATAKA STATE RURAL DEVELOPMENT AND PANCHAYAT RAJ UNIVERSITY ORDINANCE GOVERNING THE ADMISSION OF STUDENTS TO VARIOUS COURSES, SCHOLARSHIP, PAYMENT OF FEES, CONDUCT AND RESIDENCE OF STUDENTS, 2019'.

Approval for the following Regulations/Rules is still awaited.

1. Regulations Governing Cadre, Recruitment and Promotion of Non-teaching, Technical and Ministerial Staff in the Karnataka State Rural Development and Panchayat Raj University, 2019.

2. Karnataka State Rural Development and Panchayat Raj University (Classification, Control and Appeal) Rules, 2019.

The matter is placed before the Executive Council for kind information.

**ನಿರ್ಣಯ**

ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡಿರುವ ವಿನಿಯಮಗಳು ಮತ್ತು ಪರ್ಯಾದೇಶಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಗಮನಿಸಿತು.

**RESOLUTION**

The Executive Council noted the approval of the Regulations and Ordinances by the Hon'ble Chancellor.

**ವಿಷಯ ಸಂಖ್ಯೆ 10: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಘಟಕವನ್ನು ಪ್ರಾರಂಭಿಸುವ ಬಗ್ಗೆ.**

**Subject No.10: To consider starting of a Unit of Indian Red Cross Society in the KSRDPR University, Gadag.**

**ಪರಾಮರ್ಶನ ಟಿಪ್ಪಣಿ**

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು, ಇದರ ಪ್ರಧಾನ ಕಾರ್ಯದರ್ಶಿಯವರು ವಿಶ್ವವಿದ್ಯಾಲಯದ ಕುಲಪತಿಗಳಿಗೆ ಬರೆದಿರುವ ತಮ್ಮ ಪತ್ರ ಸಂ. IRCS/YRC/3464-3506/2019-20, ದಿನಾಂಕ 24–09–2019 ರಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಒಂದು ಯುವ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಕೋರಿದ್ದಾರೆ. ಪತ್ರದ ವಿವರ ಈ ಕೆಳಕಂಡಂತಿದೆ.

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಅಂತರರಾಷ್ಟ್ರೀಯ ಮಾನವೀಯ ಸೇವಾ ಸಂಸ್ಥೆಯಾಗಿದ್ದು, 1920 ರಲ್ಲಿ ಭಾರತದ ಸಂಸತ್ತಿನ ಕೇಂದ್ರ ಕಾಯ್ದೆ–15 ರಡಿಯಲ್ಲಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ (ಪಾರ್ಲಿಮೆಂಟ್ ಆಕ್ಟ್–1920) ರಲ್ಲಿ ಸ್ಥಾಪನೆಗೊಂಡಿದೆ. ಈ ಸಂಸ್ಥೆಯ ಅಧ್ಯಕ್ಷರು, ಗೌರವಾನ್ವಿತ ರಾಷ್ಟ್ರಪತಿಗಳಾಗಿದ್ದು, 'ದಲ್ಲಿ 1921 ರಲ್ಲಿ ಕರ್ನಾಟಕ ಶಾಖೆ ಅಸ್ತಿತ್ವಕ್ಕೆ ಬಂದಿದೆ. ಕರ್ನಾಟಕ ರಾಜ್ಯ ಘನತೆವೆತ್ತ ರಾಜ್ಯಪಾಲರು ಇದರ ಅಧ್ಯಕ್ಷರಾಗಿರುತ್ತಾರೆ. ಇವರುಗಳ ಮಾರ್ಗದರ್ಶನದಲ್ಲಿ ರೆಡ್ ಕ್ರಾಸ್ ಸಂಸ್ಥೆಯು ಹಲವಾರು ಮಾನವೀಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿರುತ್ತದೆ.

ಯುದ್ಧ ಸಮಯದಲ್ಲಿ ಗಾಯಗೊಂಡ ಸೈನಿಕರಿಗೆ, ನೈಸರ್ಗಿಕ ವಿಪತ್ತು, ವಿಕೋಪಗಳು ಸಂಭವಿಸಿದಾಗ ಪರಿಹಾರ ಕಾರ್ಯ, ಆರೋಗ್ಯದ ಬಗ್ಗೆ ಅರಿವು ಮತ್ತು ಶಿಕ್ಷಣ, ರಕ್ತನಿಧಿಗಳು, ಅಂಗವಿಕಲರಿಗೆ ಸಾಧನ ಸಲಕರಣೆಗಳ ವಿತರಣೆ, ಪ್ರಥಮ ಚಿಕಿತ್ಸೆ, ಯುದ್ಧ, ಪ್ರಕೃತಿ ವಿಕೋಪಗಳಿಂದಾಗಿ ಚದುರಿಹೋಗಿರುವ ಕುಟುಂಬಗಳ ಸದಸ್ಯರನ್ನು ಪತ್ತೆ ಮಾಡಿ ಒಂದುಗೂಡಿಸುವುದು, ಶಾಲಾ ಕಾಲೇಜುಗಳಲ್ಲಿ ಕಿರಿಯ/ಯುವ ರೆಡ್ ಕ್ರಾಸ್ ಸಂಸ್ಥೆಯ ಪ್ರಮುಖ ಕಾರ್ಯ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿರುತ್ತದೆ.

ಇದಲ್ಲದೇ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು, ಪ್ರಥಮ ಚಿಕಿತ್ಸೆ ತರಬೇತಿ, ವಿಪತ್ತು ನಿರ್ವಹಣಾ ತರಬೇತಿ, ರಕ್ತ ಸಂಗ್ರಹಣಾ ಶಿಬಿರಗಳನ್ನು ಏರ್ಪಡಿಸುವುದು, ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳ ಮುಖಾಂತರ ಸಾರ್ವಜನಿಕರಿಗೆ ಔಷಧಿಗಳನ್ನು ಒದಗಿಸುವುದು ಇನ್ನೂ ಮುಂತಾದ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ.

ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರವು ಇಡಿ/64/ವಿವಿಧ/2011, ಬೆಂಗಳೂರು ದಿನಾಂಕ : 22/12/2011 ಮತ್ತು ಇಡಿ/38/ವಿವಿಧ/2016, ಬೆಂಗಳೂರು ದಿನಾಂಕ : 17/06/2016 ರ ಪ್ರಕಾರ ಆಡಳಿತ ಮತ್ತು ಶೈಕ್ಷಣಿಕ ಅಧಿಕಾರ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ/ಅನುದಾನ ರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್ ಪಾಲಿಟೆಕ್ನಿಕ್ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳು ರೂ 1500/– ಒಮ್ಮೆ ಯುವ ರೆಡ್ ಕ್ರಾಸ್ ಗೆ ಪಾವತಿಸಿ ನೊಂದಾಯಿಸಿಕೊಳ್ಳತಕ್ಕದ್ದು ಹಾಗೂ ಪ್ರತಿ ವರ್ಷ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ರೂ 50/– ಅನ್ನು ರೆಡ್ ಕ್ರಾಸ್ ಗೆ ಶುಲ್ಕವಾಗಿ ಸಂಗ್ರಹಿಸಿ ಅದರಲ್ಲಿ ಶೇ. 30% ರಷ್ಟನ್ನು ಅಂದರೆ ಪ್ರತಿಯೊಬ್ಬ ವಿದ್ಯಾರ್ಥಿನಿಯಿಂದ ರೂ 15/– (ಹದಿನೈದು ರೂಪಾಯಿಗಳು) ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು, ಇಲ್ಲಿಗೆ ಕಳುಹಿಸಿಕೊಡುವಂತೆ ಹಾಗೂ ಉಳಿದ ರೂ 35–/ (ಮೂವತ್ತೈದು ರೂಪಾಯಿಗಳು ಮಾತ್ರ) ಕಾಲೇಜು/ ವಿಶ್ವವಿದ್ಯಾಲಯ ಯುವ ರೆಡ್ ಕ್ರಾಸ್ ಘಟಕಗಳಲ್ಲಿ ಉಳಿಸಿಕೊಂಡು ಯುವ ರೆಡ್ ಕ್ರಾಸ್ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಆದೇಶಿಸಿದೆ. ಈಗಾಗಲೇ ಕರ್ನಾಟಕ ರಾಜ್ಯದ ವಿವಿಧ ವಿಶ್ವ ವಿದ್ಯಾಲಯಗಳಿಂದ ಸುಮಾರು 1,900 ಕ್ಕೂ ಹೆಚ್ಚು ಕಾಲೇಜುಗಳು ಸದಸ್ಯತ್ವ ಹೊಂದಿದ್ದು, ಯುವ ರೆಡ್ ಕ್ರಾಸ್ ಚಟುವಟಿಕೆಗಳಲ್ಲಿ ಕಾರ್ಯನಿರತವಾಗಿವೆ.

ಆದುದರಿಂದ ನಮ್ಮ ವಿಶ್ವವಿದ್ಯಾಲಯವು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಯುವ ರೆಡ್ ಕ್ರಾಸ್‌ಗೆ ಸದಸ್ಯತ್ವ ಪಡೆಯಲು ಕರ್ನಾಟಕ ರಾಜ್ಯ ಶಾಖೆಯ ಯುವ ರೆಡ್ ಕ್ರಾಸ್‌ಗೆ ರೂ 1,500 /– ಮೊತ್ತವನ್ನು ಸದಸ್ಯತ್ವವನ್ನು ಪಡೆಯಲು ಪಾವತಿಸಬೇಕಾಗಿದೆ. ಭಾರತೀಯ ಯುವ ರೆಡ್ ಕ್ರಾಸ್ ಸಂಸ್ಥೆಯು ಪ್ರತಿಯೊಬ್ಬ ವಿದ್ಯಾರ್ಥಿಗಳಿಂದ ರೂ. 50/– ಅನ್ನು ರೆಡ್ ಕ್ರಾಸ್ ಶುಲ್ಕವನ್ನು ಸಂಗ್ರಹಿಸಲು ತಿಳಿಸಿದೆ. 2019–20 ನೇ ಸಾಲಿನ ನಮ್ಮ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಪ್ರವೇಶ ಮುಕ್ತಾಯವಾಗಿರುವುದರಿಂದ ಈ ಶುಲ್ಕವನ್ನು ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ಸಂಗ್ರಹಿಸಬಹುದು ಹಾಗು ರೂ. 1,500/– ಮೊತ್ತವನ್ನು ವಿಶ್ವವಿದ್ಯಾಲಯದ ವತಿಯಿಂದ ಪಾವತಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಭಾರತೀಯ ಯುವ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಲು ಹಾಗೂ 2019–20ನೇ ಸಾಲಿನಲ್ಲಿ ಚಟುವಟಿಕೆಗಳನ್ನು ಪ್ರಾರಂಭಿಸಲು ಹಾಗೂ ಇದೇ ಶೈಕ್ಷಣಿಕ ವರ್ಷದಿಂದ ನಿಗಧಿತ ಶುಲ್ಕ ರೂ. 50/– ಅನ್ನು ವಿದ್ಯಾರ್ಥಿಗಳಿಂದ ಸಂಗ್ರಹಿಸಲು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

**Reference Note:**

The General Secretary, Indian Red Cross Society, Karnataka State Branch, Bengaluru, in his letter No. IRCS/YRC/3464-3506/2019-20, dated 24/09/2019, addressed to the Vice Chancellor, KSRDPR University, Gadag, has requested to start a Unit of Indian Red Cross Society in the University. The details of the letter are as follows:

Indian Red Cross Society is an International humanitarian organization, established in India in the year 1920 through the Indian Parliament Act No. XV (Parliament Act-1920). The Hon'ble President of India is the national President of this Society. A branch of Indian Red Cross Society was established in Karnataka during 1921. The Hon'ble Governor of Karnataka is its President and the Red Cross Society has been successfully conducting various humanitarian activities under his guidance.

The Society has been successfully organizing the programmes like, relief services to the wounded soldiers in times of wars, natural disasters, health and literacy awareness programmes, blood banks, distribution of aids to physical handicapped persons, first aid, identification and unification of displaced families due to natural calamities, coordinating the major activities of Junior/Youth units of the Society in Schools and Colleges.

Apart from this, the Indian Red Cross Society has been conducting training programmes in First Aid, Disaster Management, Blood Donation Camps, distribution of medicines through Prime Minister's Janoushadhi Centres and other social activities.

The Department of Higher Education, Govt. of Karnataka vide its letter No. ED 64 Misc 2016, dated 22/12/2011 and No. ED 38 Misc 2016, dated 17/06/2016, has directed all the Government/Un-Aided First Grade Colleges, Engineering Polytechnic Colleges and Universities coming under its purview, to get registered with the Indian Youth Red Cross Society by paying a sum of Rs. 1,500/- and collect Rs. 50/- per annum from every student, send 30% of it (Rs.15/-) to the Indian Red Cross Society, Karnataka Branch, by retaining Rs. 35/- for conducting Youth Red Cross activities through the Unit. Around 1900 Colleges under different Universities in Karnataka have already become members of the Red Cross Society and involved in the Youth Red Cross activities.

Therefore, in order to become a member of the Indian Red Cross Society, our University has to subscribe a sum of Rs. 1500/-. This amount may be remitted by the University from its funds. The Red Cross Society has asked us to collect Rs. 50/- from every student.

Under these circumstances, the matter of starting a Unit of Youth Red Cross Society in the University by remitting Rs. 1,500/- to the Karnataka State Branch of Indian Red Cross Society for the academic year 2019-20, and to start the activities from the current academic year by collecting the amount of Rs. 50/- from the students is placed before the Executive Council for consideration and approval.

## ನಿರ್ಣಯ

ವಿಶ್ವವಿದ್ಯಾಲಯದಲ್ಲಿ 2019–20 ನೇ ಶೈಕ್ಷಣಿಕ ಸಾಲಿನಿಂದ ಯುವ ರೆಡ್ ಕ್ರಾಸ್ ಸೊಸಾಯಿಟಿಯ ಒಂದು ಘಟಕವನ್ನು ಪ್ರಾರಂಭಿಸಲು, ವಿಶ್ವವಿದ್ಯಾಲಯದ ವತಿಯಿಂದ ಕರ್ನಾಟಕ ರಾಜ್ಯ ಶಾಖೆಯಾದ ಭಾರತೀಯ ರೆಡ್ ಕ್ರಾಸ್ ಸೊಸೈಟಿಗೆ ರೂ. 1500–00 ಸಂದಾಯ ಮಾಡಲು ಹಾಗೂ ವಿದ್ಯಾರ್ಥಿಯಿಂದ ರೂ. 50–00 ಶುಲ್ಕ ಪಡೆದು, ಚಟುವಟಿಕೆಗಳನ್ನು ಪ್ರಾರಂಭಿಸಲು ಕಾರ್ಯನಿರ್ವಾಹಕ ಪರಿಷತ್ತು ಅನುಮೋದನೆ ನೀಡಿತು.

## RESOLUTION

The Executive Council resolved to approve the proposal to start a Unit of Youth Red Cross Society in the University by remitting Rs. 1,500/- to the Karnataka State Branch of Indian Red Cross Society for the academic year 2019-20, and to start the activities from the current academic year by collecting the amount of Rs. 50/- each from the students.

**ವಿಷಯ ಸಂಖ್ಯೆ 11: ಜಿಲ್ಲಾ/ ತಾಲ್ಲೂಕು/ ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಇತರ ಇಲಾಖೆಗಳ ಅಧಿಕಾರಿಗಳಿಗೆ ತರಬೇತಿ ನೀಡುವ ಬಗ್ಗೆ, ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಬಹುದಾದ ಸಂಬಂಧಪಟ್ಟ ಡಿಪ್ಲೊಮಾ/ಪಿ.ಜಿ. ಡಿಪ್ಲೊಮಾ / ಸರ್ಟಿಫಿಕೇಟ್ ಕೋರ್ಸ್‌ಗಳ ಬಗ್ಗೆ ಹಾಗು ಇತರ ವಿಷಯಗಳ ಬಗ್ಗೆ ಸಲಹೆ ನೀಡಲು ಸ್ಥಾಯಿ ಸಮಿತಿಯನ್ನು ರಚಿಸುವ ಬಗ್ಗೆ.**

**Subject No.11: Constitution of Standing Committee to advise the University regarding Training Programmes for ZP/TP/GP Elected representatives and Officials of RDPR and other Departments, to suggest the relevant Diploma/PG Diploma/Certificate Courses to be started in the University and on other matters – reg.**

**ಪರಾಮರ್ಶನ ಟಿಪ್ಪಣಿ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ ಪ್ರಕರಣ 30 ರಡಿ ರಚಿಸಿರುವ ಹಾಗೂ The Karnataka State Rural Development and Panchayat Raj University (Constitution of Standing Committee and Appointment of AD-Hoc Committees) Regulations, 2019 ಮಾನ್ಯ ಕುಲಾಧಿಪತಿಗಳಿಂದ ದಿನಾಂಕ 21–08–2019 ರಂದು ಅನುಮೋದನೆಗೊಂಡಿರುವ ವಿನಿಯಮಗಳ ಅನುಸಾರ ಕಾರ್ಯನಿರ್ವಾಹಕ ಪರಿಷತ್ತು ಗೊತ್ತುವಳಿಯ ಮೂಲಕ, ವಿಶ್ವವಿದ್ಯಾಲಯದ ಯಾವುದೇ ಅಧಿಕಾರವನ್ನು ಚಲಾಯಿಸುವುದಕ್ಕಾಗಿ ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಅಥವಾ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ವಿಚಾರದ ಬಗ್ಗೆ ವಿಚಾರಣೆ ನಡೆಸಲು, ವರದಿ ಮಾಡಲು ಅಥವಾ ಸಲಹೆ ನೀಡಲು, ಸೂಕ್ತವೆಂದು ಭಾವಿಸಬಹುದಾದ ಅಂಥ ಉದ್ದೇಶಗಳಿಗಾಗಿ ಮತ್ತು ಅಂಥ ಅಧಿಕಾರಗಳೊಂದಿಗೆ ಸ್ಥಾಯಿ ಸಮಿತಿಗಳನ್ನು ರಚಿಸಬಹುದು ಅಥವಾ ಹಂಗಾಮಿ ಸಮಿತಿಗಳನ್ನು ನೇಮಕ ಮಾಡಬಹುದು. ಸದರಿ ವಿನಿಮಯಗಳ ಉದ್ಧೃತ ಭಾಗ ಕೆಳಗಿನಂತಿದೆ*: (*ದಯವಿಟ್ಟು ಆಂಗ್ಲ ಭಾಷೆ ನೋಡಿ*).

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಎರಡು ಕೇಂದ್ರಗಳನ್ನು ಹೊಂದಿದೆ. 1) ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ; ಮತ್ತು 2) ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಕೇಂದ್ರ, ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಪ್ರಮುಖ ಪ್ರಕಾರ್ಯಗಳೆಂದರೆ, ಎಲ್ಲಾ ಬಗೆಯ ತರಬೇತಿ ಮತ್ತು ಪ್ರಕಟಣೆಯನ್ನು ಉತ್ತೇಜಿಸುವುದು, ಅಭಿವೃದ್ಧಿಪಡಿಸುವುದು ಮತ್ತು ವಿನ್ಯಾಸಗೊಳಿಸುವುದು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ

ಪ್ರತಿನಿಧಿಗಳಿಗೆ ಹಾಗೂ ಸರ್ಕಾರಿ ಅಧಿಕಾರಿಗಳಿಗೆ ಈ ಕೇಂದ್ರದ ಆಶ್ರಯದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಉದ್ದೇಶಿಸಿದೆ. ಆದುದರಿಂದ ತರಬೇತಿಗೆ ಅಗತ್ಯವಾದ ವಿಷಯಗಳು ಮತ್ತು ಮಾಡ್ಯೂಲ್‌ಗಳನ್ನು ಸಿದ್ದಪಡಿಸುವ ಬಗ್ಗೆ ಹಾಗು ಸಂಬಂಧಪಟ್ಟ ಡಿಪ್ಲೊಮಾ/ಪಿ.ಜಿ. ಡಿಪ್ಲೊಮಾ / ಸರ್ಟಿಫಿಕೇಟ್ ಕೋರ್ಸ್‌ಗಳ ಬಗ್ಗೆ ಹಾಗು ಇನ್ನಿತರ ವಿಷಯಗಳ ಬಗ್ಗೆ ವಿಶ್ವವಿದ್ಯಾಲಯಕ್ಕೆ ಆಗಿಂದ್ದಾಗ್ಗೆ ಸಲಹೆ ಸೂಚನೆಗಳನ್ನು ನೀಡಲು ಪರಿಣಿತರನ್ನೊಳಗೊಂಡ ಒಂದು ಸ್ಥಾಯಿ ಸಮಿತಿಯನ್ನು ರಚಿಸುವ ಅಗತ್ಯವಿದೆ.

ಇದಕ್ಕಾಗಿ ತಜ್ಞರ ಪಟ್ಟಿಮಾಡಿ ಸ್ಥಾಯಿ ಸಮಿತಿ ರಚಿಸುವ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**Reference Note:**

The Regulations framed under Section 30 of the KSRDPR University Act, 2016 Viz., *The Karnataka State Rural Development And Panchayat Raj University (Constitution of Standing Committee and Appointment of Ad-Hoc Committees) Regulations, 2019,* which have been approved by the Chancellor on 21-08-2019, provide for constitution of standing committee and appointment of ad-hoc committees by the Executive Council. The relevant portions of the Regulations read as under:

> *"**3. Constitution of Committees.-** (1) The Executive Council may, by resolution, constitute such standing committee/s or appoint ad-hoc committees for such purposes and with such powers as the Executive Council may think fit for exercising any power or discharging any function of the University or for enquiring into, reporting or advising upon any matter relating to the University for such period as may be decided by the Executive Council.*
>
> *(2) The standing committees or ad-hoc committees may be either one man committee headed by a retired Vice-Chancellor or senior retired Government Officer or with multiple members, with specialized knowledge relating to Academic Administration, Training, Research, Law, Rural Development and Panchayat Raj etc."*

The KSRDPR University has two Centres, one for Training, Publications and Supervision, and the other for Research, Innovation and Evaluation. The main functions of the Centre for the Training, Publications and Supervision are to promote, develop and design all kinds of trainings and publications. Hence, the University is planning to start some training programmes for Elected Representatives of PRIs and Government Officials under the Centre for Training, Publication and Supervision. Therefore, it is necessary to prepare training modules, for which there is a need to constitute a Standing Committee to advise the University from time to time regarding organizing relevant Training programmes for ZP/TP/GP elected representatives, Officials of RDPR and other departments, to suggest the relevant Diploma/PG Diploma/Certificate Courses to be started in the University and on other issues.

Therefore, it is proposed to constitute a Standing Committee for this purpose. A panel of Experts / Members for constituting the Standing Committee is proposed as under:

1. Prof. B. Thimme Gowda,
   Former Vice Chancellor, KSRDPRU, Gadag. .... Chairman

2. The Registrar, KSRDPRU, Gadag. ... Member

3. Dr. Prakash Bhat,
   Member, Executive Council, KSRDPRU and
   Director, SKDRDB, Dharwad. .... Member

4. Dr. S.S. Meenakshisundaram, IAS (Retd.)
   Former Secretary to Government of Karnataka
   RDPR Department, Member, Executive Council, KSRDPRU &
   Chairman, MYRADA, No.2, Service Road
   Domlur Layout, Bengaluru-560 071. ... Member

5. The Director (P.R.-2),
   Rural Development and Panchayat Raj Department,
   Government of Karnataka, Bengaluru. .... Member

6. Prof. N. Sivanna,
   Honorary Professor, KSRDPRU and,
   CEO, Karnataka Panchayat Parishat, Bengaluru. .... Member

7. Shri Pranesh Rao,
   Deputy Secretary, ZP, Gadag &
   Former Director, SIRD, Mysore .... Member

8. Dr. Ganesh Prasad,
   Abdul Nazir Sab State Institute of Rural Development
   and Panchayat Raj, Mysuru. .... Member

9. Shri Kempegowda,
   Director (Retd.), and Adviser to RDPR Department,
   Govt. of Karnataka, Bengaluru. .... Member

10. Shri S. A. Siddhanti
    Director (Retd.),
    Regional Institute of Co-operative Management (RICM),
    No. 67, Padmanabhanagar, Banashankari II Stage,
    Bengaluru- 560 070. .... Member

11. Dr. Abdul Aziz Mulla
    Assistant Director, Centre for Training, Publication
    and Supervision, KSRDPR University, ....Member Secretary

The proposed panel for constituting the Standing Committee as above, is placed before the Executive Council for consideration and approval.

**ನಿರ್ಣಯ**

ಪ್ರಸ್ತಾವನೆಯಲ್ಲಿರುವಂತೆ ಜಿಲ್ಲಾ/ ತಾಲ್ಲೂಕು/ ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಇತರ ಇಲಾಖೆಗಳ ಅಧಿಕಾರಿಗಳಿಗೆ ತರಬೇತಿ ನೀಡುವ ಬಗ್ಗೆ, ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಬಹುದಾದ ಸಂಬಂಧಪಟ್ಟ ಡಿಪ್ಲೊಮಾ/ಪಿ.ಜಿ. ಡಿಪ್ಲೊಮಾ / ಸರ್ಟಿಫಿಕೇಟ್ ಕೋರ್ಸಗಳ ಬಗ್ಗೆ ಸಲಹೆ ನೀಡಲು ಸ್ಥಾಯಿ ಸಮಿತಿಯನ್ನು ರಚಿಸಲು ಕಾರ್ಯನಿರ್ವಾಹಕ

ಪರಿಷತ್ತು ನಿರ್ಣಯಿಸಿತು. ಸ್ಥಾಯಿ ಸಮಿತಿಯ ಅವಧಿ 3 ವರ್ಷಗಳಾಗಿದ್ದು, ನಾಮನಿರ್ದೇಶಿತ ಸದಸ್ಯರ ಅವಧಿ ಆಯಾ ಪ್ರಾಧಿಕಾರಗಳಲ್ಲಿ ಅವರ ನಾಮ ನಿರ್ದೇಶನ ಅವಧಿಯು ಮುಗಿಯುವವರೆಗೆ ಮಾತ್ರ ಇರುತ್ತದೆ. ಈ ಸಂದರ್ಭದಲ್ಲಿ ಶ್ರೀ ಬಿ. ಜಿ. ಗೋವಿಂದಪ್ಪ ಅವರು ಮಾತನಾಡಿ ಚುನಾಯಿತ ಪಂಚಾಯತ್ ಪ್ರತಿನಿಧಿಗಳಿಗೆ ತರಬೇತಿ ನೀಡುವುದು ಅತ್ಯಂತ ಅವಶ್ಯಕವಾಗಿದೆ. ಆದುದರಿಂದ ಆದ್ಯತೆಯ ಮೇಲೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

## RESOLUTION

The Executive Council resolved to approve the proposal to constitute the Expert Committee as detailed in the Agenda to advise the University from time to time regarding organizing relevant Training programmes for ZP/TP/GP elected representatives, Officials of RDPR and other departments, to suggest the relevant Diploma/PG Diploma/Certificate Courses to be started in the University. The term of the Standing Committee shall be three years. However, the term of the nominated members will be co-terminus with their nomination to the respective bodies. Shri B.G. Govindappa said that providing training to the ZP/TP/GP elected representatives is the need of the hour and therefore it should be taken up on priority basis.

**ವಿಷಯ ಸಂಖ್ಯೆ 12 : ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ತಾತ್ಕಾಲಿಕ ಆಯವ್ಯಯ ಅಂದಾಜುಗಳನ್ನು ಪರಿಗಣಿಸುವ ಬಗ್ಗೆ.**

**To consider the tentative Budget Proposal for conducting training programmes in the University.**

<u>ಪರಾಮರ್ಶನ ಟಿಪ್ಪಣಿ</u>

ಕರ್ನಾಟಕ ರಾಜ್ಯದಲ್ಲಿ ಬೋಧನೆ, ತರಬೇತಿ ಮತ್ತು ಅಧ್ಯಯನದ ಮೂಲಕ ಗ್ರಾಮೀಣ ಪಂಚಾಯತ್ ಸಂಸ್ಥೆಗಳ ಸುಸ್ಥಿರ ಅಭಿವೃದ್ಧಿಗಾಗಿ ಹಾಗೂ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವಿಕೆ ಮತ್ತು ಗ್ರಾಮೀಣ ಪ್ರದೇಶಗಳ ಅಭ್ಯಾಸ ಮತ್ತು ಅಧ್ಯಯನ ಮಾಡುವುದರ ಮೂಲಕ ಸಮಗ್ರ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ವಿಶ್ವವಿದ್ಯಾಲಯದ ಗುರಿಯು ಬಡತನವನ್ನು ಕಡಿಮೆ ಮಾಡಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಜನರು ತಮ್ಮದೇ ಆದ ಕ್ಷೇಮಾಭಿವೃದ್ಧಿ, ಆರ್ಥಿಕ ಮತ್ತು ಸಾಮಾಜೋ-ರಾಜಕೀಯ ಪ್ರಗತಿಗೆ ನಿರ್ಧಾರಗಳನ್ನು ತೆಗೆದುಕೊಳ್ಳುವಂತಹ ಪಂಚಾಯತ್ ರಾಜ್ ಸಂಸ್ಥೆಗಳ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲಕ ಅಂತರ್ಗತ ಬೆಳವಣಿಗೆಗೆ ಕಾರಣವಾಗುವ ಆರೋಗ್ಯ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿಗಳಲ್ಲಿ ಅಗತ್ಯ ಸೇವೆಗಳನ್ನು ನೀಡಲು ಅವಕಾಶವೀಯುವ ತ್ವರಿತ ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ವಿವಿಧ ಪಾಲುದಾರರಿಗೆ ಶಿಕ್ಷಣ ಮತ್ತು ತರಬೇತಿ ನೀಡುವುದು.

ಈ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸಲು ವಿಶ್ವವಿದ್ಯಾಲಯ ಎರಡು ಕೇಂದ್ರಗಳನ್ನು ಹೊಂದಿದೆ. 1) ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ; ಮತ್ತು 2) ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಕೇಂದ್ರ, ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಪ್ರಮುಖ ಪ್ರಕಾರ್ಯಗಳೆಂದರೆ, (1) ಎಲ್ಲಾ ಬಗೆಯ ತರಬೇತಿ ಮತ್ತು ಪ್ರಕಟಣೆಯನ್ನು ಉತ್ತೇಜಿಸುವುದು, ಅಭಿವೃದ್ಧಿಪಡಿಸುವುದು ಮತ್ತು ವಿನ್ಯಾಸಗೊಳಿಸುವುದು; (2) ಎಲ್ಲಾ ಬಗೆಯ ಪಂಚಾಯತ್ ಸದಸ್ಯರು ಮತ್ತು ಅಧಿಕಾರಗಳಿಗೆ ತರಬೇತಿ ನೀಡುವುದು; (3) ಅಭಿವೃದ್ಧಿ ವಿಷಯಗಳ ಕುರಿತು ವಿಚಾರ ಸಂಕಿರಣಗಳನ್ನು ಆಯೋಜಿಸುವುದು ಮತ್ತು ಕಿರು ಹೊತ್ತಿಗೆಗಳು, ಪುಸ್ತಕಗಳು, ನಿಯತಕಾಲಿಕೆಗಳು ಹಾಗೂ ಪಠ್ಯಪುಸ್ತಕಗಳನ್ನು ಪ್ರಕಟಿಸುವುದು; (4) ಕೌಶಲ್ಯ ಮತ್ತು ಉದ್ಯಮಶೀಲತಾ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಧ್ಯಯನ ಮತ್ತು ತರಬೇತಿಗಳಿಗೆ ಉತ್ತೇಜನ ನೀಡುವುದು ಹಾಗೂ ಮುಂತಾದವು.

ಈ ಹಿನ್ನೆಲೆಯಲ್ಲಿ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ವತಿಯಿಂದ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಸರ್ಕಾರಿ ಅಧಿಕಾರಿಗಳಿಗೆ ಕೆಲವು ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ ಪ್ರಕರಣ 28ರ ಉಪ ಪ್ರಕರಣ (4) ರನುಸಾರ ವಿಶ್ವವಿದ್ಯಾಲಯದ ಹಣಕಾಸು, ಲೆಕ್ಕ-ಪತ್ರ, ಹೂಡಿಕೆ, ಸ್ವತ್ತು, ವ್ಯವಹಾರ ಮತ್ತು ಇತರ ಎಲ್ಲಾ ಆಡಳಿತಾತ್ಮಕ ವ್ಯವಹಾರಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು ಹಾಗೂ ಅಂಥ ಉದ್ದೇಶಗಳಿಗಾಗಿ, ಅದು ಸೂಕ್ತವೆಂದು ನೇಮಿಸಬಹುದಾದಂಥ ಏಜೆಂಟರನ್ನು ನೇಮಕ ಮಾಡುವ ಅಧಿಕಾರ ಕಾರ್ಯನಿರ್ವಾಹಕ ಪರಿಷತ್ತಿಗೆ ಇರುತ್ತದೆ. ಆದುದರಿಂದ ದಿನಾಂಕ 06 ಜುಲೈ, 2019 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ಅನುಮೋದಿಸಿರುವಂತೆ, ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕಾರ್ಯಗಳಿಗೆ ಹಾಗೂ ಕ್ಯಾಂಪಸ್‌ನಲ್ಲಿ ಮತ್ತು ಹೊರಗೆ ತರಬೇತಿ ಕಾರ್ಯಗಳನ್ನು ಆಯೋಜಿಸಲು ವಾರ್ಷಿಕವಾಗಿ ರೂ. 15,00,000/- (ಹದಿನೈದು ಲಕ್ಷ ರೂ.ಗಳು) ಉಪಯೋಗಿಸಿಕೊಳ್ಳ ಬಹುದಾಗಿದೆ. ಪ್ರಸ್ತುತ ವಿವಿಧ ಪಾಲುಧಾರರಿಗೆ ತರಬೇತಿ ನೀಡುವ ಆಡಳಿತ ತರಬೇತಿ ಕೇಂದ್ರ, SIRD, ಜಿಲ್ಲಾ ತರಬೇತಿ ಕೇಂದ್ರ, ಕೇರಳ ಇನ್‌ಸ್ಟಿಟ್ಯೂಟ್ ಆಫ್ ಲೋಕಲ್ ಅಡ್ಮಿನಿಸ್ಟ್ರೇಷನ್, ಇಂತಹ ಸಂಸ್ಥೆಗಳ ಆಯ-ವ್ಯಯಗಳನ್ನು ಆಧರಿಸಿ ನಮ್ಮ ವಿಶ್ವವಿದ್ಯಾಲಯದಲ್ಲಿ ತರಬೇತಿ ಕಾರ್ಯಗಳನ್ನು ಆಯೋಜಿಸಲು ಆಯ-ವ್ಯಯ ಅಂದಾಜುಗಳನ್ನು ತಯಾರಿಸಬೇಕಾಗಿದೆ. ಈ ಸಂಸ್ಥೆಗಳ ಆಯ-ವ್ಯಯ ವಿವರಗಳನ್ನು ಹಾಗೂ ನಮ್ಮ ವಿಶ್ವವಿದ್ಯಾಲಯದ ಪ್ರಸ್ತಾಪಿತ ಆಯ-ವ್ಯಯ ಅಂದಾಜುಗಳ ವಿವರಗಳನ್ನು ಕೆಳಗೆ ಕೊಡಲಾಗಿದೆ. (ದಯವಿಟ್ಟು ಆಂಗ್ಲ ಭಾಷೆಯಲ್ಲಿ ನೋಡಿ).

ಮೇಲಿನ ಮಾಹಿತಿಯೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಬೇಕಾಗುವ ಆಯ-ವ್ಯಯ ಅಂದಾಜುಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ನಿರ್ಣಯಕ್ಕೆ ಮಂಡಿಸಲಾಗಿದೆ.

**Reference Note:**

The KSRDPR University has been established with an intention to strengthen the local self-governance system and to give impetus for the study and research for bringing a comprehensive rural development in the State of Karnataka. The objective of the University is to impart education and training to various stakeholders for rapid economic growth and sustainable development that reduces poverty and creates employment opportunities, access to essential services in health, education and skill development, leading to inclusive growth through the democratic mechanism of PRIs, where people decide their own welfare and socio-economic and political development. To fulfil the objectives, the university has two Centres, one for Training, Publications and Supervision, and the other for Research, Innovation and Evaluation. The functions of the Centre for Training, Publications and Supervision, are: (1) To promote, develop and design all kinds of Training and Publication, 2) To train all types of Panchayat members and officers, (3) To conduct seminar on development subjects and publish Brouchers, books, magazines, text books and (4) To promote, studies, Training on skill and Entrepreneurship development, etc.

In view of this, the University is planning to start some training programmes for elected representatives of PRIs and Government Officials through the Centre for Training, Publication and Supervision.

Section 28 of the KSRDPR University Act, 2016, deals with the powers and functions of the Executive Council. Under Sub-Section (4) of Section 28, the Executive Council has the power to manage and regulate the finances, accounts, investments, property, business and all other

administrative affairs of the University and for that purpose to appoint such agents, as it may think fit. Therefore, as approved in the Executive Council meeting held on 6th July 2019, the University can utilize up to Rs. 15,00,000/- (Rs. Fifteen lakhs only) in a year to undertake training, publication and supervision activities and conducting on and off campus training programmes. Therefore, there is need to prepare a tentative budget proposal to conduct training programmes for the various stakeholders by considering the budget and guidelines of the various training institutes like Administrative Training Institute, SIRD, District Training Institute(DTI) and Kerala Institute of Local Administration, Kerala, where the budget prescribed for training programmes is as under:

| SL. No. | Particulars | Per Day Expenditure Per Participant (Rs.) | |
|---|---|---|---|
| | | **Administrative Training Institute (ATI), SIRD & DTI (Rates fixed during 2014)** | **Kerala Institute of Local Administration (KILA) (Rates fixed during 2019)** |
| 1. | Food Charges | 130-00 (without accommodation) 180-00 (with accommodation | 240-00 |
| 2. | Accommodation for participants | 600-00 | 250-00 |
| 3. | Training Materials /Manuals / Kit | 38-00 | 427-00 |
| 4. | Administrative Expenses | 600-00 | 15 % of the total cost |
| 5. | Resource Person charges (per session):<br>(a) Subject Matter Specialist | 2000-00 | Rs. 400-00 per session. If more than one session per day-max. of Rs. 800-00 |
| | (b) Subject Eminence | 5000-00 | - |
| 6. | TA for Resource Person | 300-00 | Within the district only local conveyance i.e. Rs. 350-00 per day. Outside district-train fare (3 AC)+Rs. 350-00 per day local conveyance |
| 7. | Training Coordinator Fees | 200-00 | Rs. 1000/- per day (TA- Within the district only local conveyance i.e. Rs. 350 per day. Outside district-train fare (3rd AC)+Rs. 350 per day local conveyance) |
| 8. | Registration Staff (per training) | 500-00 | - |
| 9. | Supporting Staff (Attender) | 100-00 | 645-00 |
| 10. | Internal Transportation | – | 20000-00 |

| | | | |
|---|---|---|---|
| 11. | Rents (instruments & Others) | 600-00 | 3000-00 |
| 12. | Group Photos (for a group) | 400-00 | 1000-00 |
| 13. | Conference Bags / Mementos | – | - |

Keeping in view the above and the prevailing market rates, it is proposed the budget for training programmes in the University is as under:

| SL. No. | Particular | Per Day Expenditure Per Participants (Rs.) |
|---|---|---|
| 1. | Food Charges (including tea, snacks, meal, etc.) | 250 |
| 2. | Accommodation for participants, if not provided by the University | Actuals or max. of 1500 |
| 3. | Training Kit Cost | Actuals |
| 4. | Training Materials /Manuals | Actuals |
| 5. | Resource Person charges (per session):<br>(a) Subject Matter Specialist<br>(b) Subject Eminence<br>(As per the Govt. Order No: ಸಿಆಸುಇ 80 ಇಆತ 2019, ಬೆಂಗಳೂರು, ದಿನಾಂಕ: 04-09-2019) | 2000<br>5000 |
| 6. | Guest House Charges for resource persons | 200 per day (if accommodation is not provided in Guest House, actual or Max. of Rs.1500/- |
| 7. | TA for Resource Person | The Guests/Resource persons/ experts/ invitees etc. may be paid First or Second Class AC train fare (on production of Ticket) I A.C. Sleeper/Volvo bus fare / Road mileage of Rs. 10 per k.m (Actual distance separately for onward and return journey) own or hired vehicle, If daily minimum distance is to be paid then the actual rent be paid for Maruthi Desire or equivalent A.C Vehicle, on production of bill /self-declaration for own vehicle or Air fare (Economy Class) with the approval of the Vice Chancellor. The tickets may be booked in advance or reimbursed on claim.<br>**Local Conveyance** up to 1000/- (each side) if claimed on self declaration, production of bill is not be compulsory. Actual or up to Rs. 1,500/- on production of bill and if above 1,500/- on production of bill with approval of Vice Chancellor. |
| 8. | Training Coordinator Fees | 500 per programme |

| | | |
|---|---|---|
| 9. | Registration Staff (per training) | 200 |
| 10. | Supporting Staff (Attender) | 100 |
| 11. | Internal Transportation for training person, if required. | Actual or Max. of 10,000 |
| 12. | Internal Transportation for field visit | Actuals |
| 13. | Rents (instruments & Others) | Actuals |
| 14. | Group Photos, including videos | 5,000 per programme |
| 15. | Conference Bags / Mementos | 500 per person |
| 16. | Miscellaneous Expenses | 10,000 |

**Note**: TA, if not provided by any organization, may be paid from the University.

With this information, the matter of budgetary proposal for training programme is placed before the Executive Council for consideration and decision.

**ನಿರ್ಣಯ**

ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಪ್ರಸ್ತಾಪಿತ ಆಯವ್ಯಯ ಅಂದಾಜುಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

The Executive Council resolved to approve the proposed Budget for conducting training programmes in the University.

**ವಿಷಯ ಸಂಖ್ಯೆ 13: ವಿಶ್ವವಿದ್ಯಾಲಯದಲ್ಲಿ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲು 'ಕ್ರೀಡಾ ನೀತಿ' ಮತ್ತು ಮಾರ್ಗಸೂಚಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**Subject No.13: To consider and approve the Sports Policy and Guidelines for conducting sports activities in the University – reg.**

<u>ಪರಾಮರ್ಶನ ಟಿಪ್ಪಣಿ:</u>

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಧ್ಯೆಯೋದ್ದೇಶಗಳಲ್ಲಿ ಒಂದು– *"ಸಾಮುದಾಯಿಕ ಮನರಂಜನಾ ಕಾರ್ಯಕ್ರಮಗಳು, ಹಬ್ಬ ಹರಿದಿನಗಳು, ಜಾತ್ರೆಗಳು ಹಾಗು ಇತರ ಸಾಂಸ್ಕೃತಿಕ ಸಂಘಟನೆಗಳು ಮತ್ತು ಸಂಸ್ಥೆಗಳು, ಗ್ರಾಮೀಣ ಆಟೋಟಗಳು, ಯೋಗ–ಧ್ಯಾನ, ಗ್ರಾಮೀಣ ಆರೋಗ್ಯ ಚಿಕಿತ್ಸಾಲಯಗಳನ್ನು ಉತ್ತೇಜಿಸುವ ಮೂಲಕ ಉತ್ತಮ ಆಹಾರ ಹಾಗೂ ಪೌಷ್ಠಿಕಾಂಶಗಳ ನಿರ್ವಹಣೆಯನ್ನು ಸಾಧ್ಯವನ್ನಾಗಿಸಿ ಸಾಮಾಜಿಕ, ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಉತ್ತಮಗೊಳಿಸುವುದು"*. ವಿಶ್ವವಿದ್ಯಾಲಯವನ್ನು ಶೈಕ್ಷಣಿಕವಾಗಿ ಒಂದು ಉತ್ಕೃಷ್ಟ ಕೇಂದ್ರವಾಗಿಸಲು ಶ್ರಮಿಸಲಾಗುತ್ತಿದೆ. ಜೊತೆಗೆ ವಿದ್ಯಾರ್ಥಿಗಳ ಆರೋಗ್ಯ ಸುಧಾರಣೆಗೆ ಮತ್ತು ಸಮಗ್ರ ವ್ಯಕ್ತಿತ್ವ ವಿಕಸನಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಪ್ರಾಯೋಜಿಸಲಾಗುತ್ತಿದೆ. ಕ್ರೀಡಾ ಮತ್ತು ಆಟೋಟಗಳ ಮೂಲಕ ವಿದ್ಯಾರ್ಥಿ ಸಮುದಾಯದಲ್ಲಿ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯವನ್ನು ಉತ್ತಮಗೊಳಿಸುವುದು ಇವುಗಳ ಉದ್ದೇಶವಾಗಿದೆ. ಕರ್ನಾಟಕ ಸರ್ಕಾರ ವಿಶ್ವವಿದ್ಯಾಲಯಕ್ಕೆ ಬೋಧಕ–ಬೋಧಕೇತರ ಹುದ್ದೆಗಳನ್ನು ಸೃಜಿಸುವಾಗ

(ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 02 ಜಿಪಸ 2017, ದಿನಾಂಕ 11-05-2017) ದೈಹಿಕ ಶಿಕ್ಷಣ ನಿರ್ದೇಶನಾಲಯವನ್ನು ಸೃಜಿಸುವುದರ ಜೊತೆಗೆ ಒಂದು ದೈಹಿಕ ಶಿಕ್ಷಣ ನಿರ್ದೇಶಕರು (ವಿಶ್ವವಿದ್ಯಾಲಯದ ಅಧಿನಿಯಮ, 2016ರ ಪ್ರಕರಣ 23ರಂತೆ), ಒಂದು ಉಪನಿರ್ದೇಶಕ ಹಾಗೂ ಒಂದು ಸಹಾಯಕ ನಿರ್ದೇಶಕ ಹುದ್ದೆಗಳು ಹಾಗೂ ಇತರ ಆಡಳಿತಾತ್ಮಕ ಹುದ್ದೆಗಳನ್ನು ಸೃಜಿಸಿ ಮಂಜೂರು ಮಾಡಿದೆ.

ವಿಶ್ವವಿದ್ಯಾಲಯದಲ್ಲಿ ಕ್ರೀಡಾ ಚಟುವಟಿಕೆಗಳನ್ನು ನಡೆಸಲು ಒಂದು ಕ್ರೀಡಾ ನೀತಿ ಮತ್ತು ಮಾರ್ಗಸೂಚಿಗಳ ಅಗತ್ಯವಿದೆ. ಇದನ್ನು ಗಮನಿಸಿ ಕುಲಪತಿಗಳು ಕ್ರೀಡಾ ನೀತಿ ಮತ್ತು ಮಾರ್ಗಸೂಚಿಗಳನ್ನು ರಚಿಸಲು ಒಂದು ತಜ್ಞರ ಸಮಿತಿಯನ್ನು ದಿನಾಂಕ 21-10-2019 ರಂದು ರಚಿಸಿದರು. ಈ ಸಮಿತಿ ದಿನಾಂಕ 25-10-2019 ರಂದು ಬೆಂಗಳೂರಿನ ಪ್ರಾದೇಶಿಕ ಕಛೇರಿಯಲ್ಲಿ ಸಭೆ ಸೇರಿ ರಾಜ್ಯದ ಇತರ ವಿಶ್ವವಿದ್ಯಾಲಯಗಳ ಮಾದರಿಯಲ್ಲಿ ಒಂದು ಕ್ರೀಡಾ ನೀತಿ ಮತ್ತು ಮಾರ್ಗಸೂಚಿಗಳನ್ನು ತಯಾರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ.

ತಜ್ಞರ ಸಮಿತಿ ಸಬೆಯ ನಡವಳಿಗಳು, ಕ್ರೀಡಾ ನೀತಿ ಹಾಗೂ ಮಾರ್ಗಸೂಚಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**Reference Note:**

One of the objectives of the Karnataka State Rural Development and Panchayat Raj University is *"To improve social, psychological and physical health through promotion of community entertainment programmes, festivals, Jatras, and other cultural outfits and institutions, rural sports-games, Yoga-meditation, rural health clinics, better food and nutrition management"*. The University has been striving for academic excellence and at the same time sponsoring varieties of activities that would contribute to the wholesome development of personality and promote health among students. Sports and games are one such area promoted by the University with an intention of ensuring physical, mental and emotional health of the student community. The Government of Karnataka vide its Order No. ಗ್ರಾಅಪ 02 ಜಿಪಸ 2017, ದಿನಾಂಕ 11-05-2017, while sanctioning the teaching and non-teaching staff to the University, has been kind enough to create a Directorate of Physical Education in the University with one post of Director (*as per Section 23 of the KSRDPR University Act, 2016*), one post of Deputy Director and one post of Assistant Director with the required supporting administrative staff.

In order to conduct the sports activities in the University, it is necessary to have a Sport Policy and proper Guidelines. Keeping this in view, the Vice Chancellor has constituted an Expert Committee vide Notification dated 21st October, 2019 to formulate a Sports Policy and Guidelines. The Expert Committee consisted of the following:

1. Prof. Sundar Raj Urs
   Former Principal,
   University College of Physical Education
   Bangalore University, Bangalore. — Chairman

2. Dr. B.M. Patil
   Director of Physical Education and Sports
   Karnatak University, Dharwad-580 003. — Member

3. Dr. S.M. Prakash
   Director of Physical Education and Sports
   Kuvempu University, Shankaraghatta
   Shivamogga District. — Member

4. Shri Nagaraj
   Outstanding Sportsperson (Athletics), Gadag. — Member
   (Stationed in Bengaluru)

5. Dr. Veereshkumar Vijapur
   Asst. Director of Physical Education & Sports
   KSRDPR University, Gadag. — Member-Secretary

The Committee met on 25th October, 2019 in the Regional Office of the University at Bengaluru and submitted a Sports Policy and Guidelines on the lines of sister Universities like, University of Mysore, Kuvempu University etc, for smooth conduct of Sports and Games in the University.

The Proceedings of the meeting of the Expert Committee along with its enclosures (Sports Policy and Guidelines) are attached herewith as **Annexure-1 & 2** and placed before the Executive Council for consideration and approval.

**ನಿರ್ಣಯ**

ವಿಶ್ವವಿದ್ಯಾಲಯದಲ್ಲಿ ಕ್ರೀಡಾ ಕಾರ್ಯಕ್ರಮಗಳನ್ನು ಆಯೋಜಿಸಲು ಪ್ರಸ್ಥಾಪಿತ ಕ್ರೀಡಾ ನೀತಿ ಮತ್ತು ಮಾರ್ಗಸೂಚಿಗಳನ್ನು ಅನುಮೋದಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು. ಅಲ್ಲದೆ ಕ್ರೀಡಾ ನೀತಿ ಮತ್ತು ಮಾರ್ಗಸೂಚಿಗಳನ್ನು ಅಗತ್ಯವಿದ್ದರೆ ತಿದ್ದುಪಡಿ ಮಾಡಲು / ಪರಿಷ್ಕರಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**RESOLUTION**

The Executive Council resolved to approve the Sports Policy and Guidelines for organizing sports activities in the University. It also authorized the Vice Chancellor to make corrections/modifications, if any, in the Sports Policy and the Guidelines.

## Subject No. 14: MGNCRE-Hyderabad Rural Internship Programme-2019-20.

**Reference Note:**

Mahatma Gandhi National Council of Rural Education (MGNCRE), Dept. of Higher Education, Ministry of Human Resource Development, Government of India (MGNCRE-Hyderabad) is conducting Rural Internship Programme for the year 2019-20. Internship programme is about getting to know the village, study in various aspects like farmers, Women Self-Help Groups (SHGS), youth livelihood and skills, primary health centres, schools, Anganwadis etc.

As per the advertisement of MGNCRE-Hyderabad Internship programme 2019-20 is for the students who are studying in Rural Development Institutions and Universities. As per guidelines (enclosed), the student has to conduct a village study as a Participating, Learning and Action (PRA).

During the visit of the Vice Chancellor to MGNCRE-Hyderabad on 07/09/2019, he had requested the Chairman, MGNCRE-Hyderabad to provide an opportunity to the students and faculties of our University in Internship and Research activities of MGNCRE, which can be undertaken as part of student Internship programme.

In view of this University had requested MGNCRE to make a presentation to our students and faculty regarding the above programme. Accordingly a session was organised on 15/10/2019 and Dr. Divakar, consultant from MGNCRE, Hyderabad visited our University and explained about the Internship programme to both the faculty and students.

As per the guideline 140 students of University had applied for Internship programme with the help of faculty members. Eventhough as per the advertisement MGNCRE had asked for 40 interns at National level, upon the request of Vice Chancellor, the MGNCRE has confirmed the selection of 77 students and are still in the process of adding few more students of our University. This internship will commence from 01.11.2019.

Under this internship programme, the students will learn the Participating, Learning and Action of village and at the end of the programme upon submission of the final report and after acceptance by MGNCRE-Hyderabad, an internship remuneration of Rs. 10,000 per month (maximum of 2 months) will be paid to the students and participatory certificate will be issued by the MGNCRE-Hyderabad. To take forward the Internship programme MGNCRE has already released an amount of Rs. 11.00 lakh to the University.

The matter is placed before the Executive Council for kind information.

**ನಿರ್ಣಯ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಶಿಕ್ಷಣ ಪರಿಷತ್ತು (MGNCRE), ಹೈದರಾಬಾದ್ ಇವರ ವತಿಯಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರಾಯೋಜಿಸಿರುವ ಗ್ರಾಮೀಣ ಇಂಟ್‌ರ್ನಶಿಫ್ ಕಾರ್ಯಕ್ರಮವನ್ನು ಕಾರ್ಯನಿರ್ವಾಹಕ ಪರಿಷತ್ತು ಗಮನಿಸಿತು. ಈ ಸಂಸ್ಥೆಯೊಂದಿಗೆ ಸಹಯೋಗ ಪಡೆಯುವಲ್ಲಿ ಹಂಗಾಮಿ ಕುಲಪತಿಗಳು / ಕುಲಸಚಿವರ ಪ್ರಯತ್ನಗಳಿಗೆ ಸದಸ್ಯರು ಪ್ರಶಂಸೆ ವ್ಯಕ್ತಪಡಿಸಿದರು.

**RESOLUTION**

The Executive Council noted the proposed Rural Internship Programme offered by Mahatma Gandhi National council for Rural Education (MGNCRE), Hyderabad to the students of KSRDPR University and expressed its appreciation for the efforts of the Acting Vice Chancellor & Registrar in establishing linkage between the KSRDPR University and MGNCRE.

**ವಿಷಯ ಸಂಖ್ಯೆ 15: ತರಬೇತಿ ಕೇಂದ್ರ ಕಟ್ಟಡ ಮತ್ತು ಹಾಸ್ಟೆಲ್ ಕಟ್ಟಡದ ನೆಲಮಹಡಿಗೆ ಬಾಡಿಗೆ ನಿಗಧಿಪಡಿಸುವ ಬಗ್ಗೆ**

**ಪರಾಮರ್ಶನ ಟಿಪ್ಪಣಿ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು 2017–18 ನೇ ಸಾಲಿನಲ್ಲಿ 5 ಕೋರ್ಸ್‌ಗಳೊಂದಿಗೆ ಪ್ರಾರಂಭವಾಗಿರುತ್ತದೆ. 2018–19 ನೇ ಸಾಲಿನಲ್ಲಿ 2 ಕೋರ್ಸ್‌ಗಳನ್ನು

ಹಾಗೂ 2019-20 ನೇ ಸಾಲಿನಲ್ಲಿ ಹೊಸದಾಗಿ 3 ಕೋರ್ಸಗಳನ್ನು ಪ್ರಾರಂಭಿಸಿ, ಒಟ್ಟು 10 ಕೋರ್ಸಗಳನ್ನು ನಡೆಸಲಾಗುತ್ತಿದೆ. ಇದಲ್ಲದೆ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಈಗಾಗಲೇ ವಿಶ್ವವಿದ್ಯಾಲಯಕ್ಕೆ ಬಾಡಿಗೆ ಪಡೆಯಲಾದ ಕಟ್ಟಡಗಳಲ್ಲಿ ಸ್ಥಳಾವಕಾಶದ ಅಭಾವ ಇರುವುದರಿಂದ ಮತ್ತು ವಿಶ್ವವಿದ್ಯಾಲಯದ ಆವರಣದಲ್ಲಿ ನೂತನ ಕಟ್ಟಡಗಳ ನಿರ್ಮಾಣ ಕಾರ್ಯಕ್ಕೆ ಇನ್ನೂ ಸ್ವಲ್ಪ ಸಮಯ ಬೇಕಾದ ಕಾರಣ, ದಿ ಗದಗ ಕೋ ಆಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಇವರ ಒಡೆತನದ ತರಬೇತಿ ಕೇಂದ್ರದ ಮೊದಲನೆ ಮಹಡಿ ಹಾಗೂ ಅದೇ ಆವರಣದಲ್ಲಿರುವ ವಿದ್ಯಾರ್ಥಿ ನಿಲಯ ಕಟ್ಟಡವು ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳನ್ನು ನಡೆಸಲು ಅತ್ಯಂತ ಸೂಕ್ತವಾಗಿರುವದರಿಂದ, ಸದರಿ ಕಟ್ಟಡಗಳನ್ನು ವಿಶ್ವವಿದ್ಯಾಲಯಕ್ಕೆ ಪಿ.ಡಬ್ಲ್ಯೂ.ಡಿ ಯವರು ನಿರ್ಧರಿಸುವ ದರದಲ್ಲಿ ಬಾಡಿಗೆ ಆಧಾರದ ಮೇಲೆ ನೀಡಬೇಕೆಂದು ಕೋರಿ ದಿನಾಂಕ: 25/07/2019 ರಂದು ಅಧ್ಯಕ್ಷರು, ದಿ ಗದಗ ಕೋ ಆಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ಇವರಿಗೆ ಪತ್ರದ ಮೂಲಕ ತಿಳಿಸಲಾಗಿತ್ತು. ತದನಂತರ ದಿನಾಂಕ: 26/07/2019 ರಂದು ಪಿ.ಡಬ್ಲ್ಯೂ.ಡಿ ಯವರು ನಿರ್ಧರಿಸುವ ದರದಲ್ಲಿ ಮಾಸಿಕ ಬಾಡಿಗೆಗೆ ನೀಡಲು ತಮ್ಮ ಸಂಪೂರ್ಣ ಒಪ್ಪಿಗೆ ಇರುತ್ತದೆಂದು ಪತ್ರದ ಮೂಲಕ ತಿಳಿಸಿರುತ್ತಾರೆ.

ದಿನಾಂಕ: 07/08/2019 ರಂದು ನಡೆದ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸದರಿ ಕಟ್ಟಡಗಳನ್ನು ಲೋಕೋಪಯೋಗಿ ಇಲಾಖೆಯಿಂದ ನಿಗದಿಪಡಿಸುವ ಬಾಡಿಗೆ ದರಕ್ಕೆ ಬಾಡಿಗೆ ಪಡೆದುಕೊಳ್ಳಲು ಸಭೆಯು ಅನುಮೋದನೆ ನೀಡಿತ್ತು. ಅದರಂತೆ ದಿನಾಂಕ: 01/09/2019 ರಿಂದ ತರಬೇತಿ ಕೇಂದ್ರ ಕಟ್ಟಡದ ಮೊದಲನೆಯ ಮಹಡಿ ಮತ್ತು ದಿನಾಂಕ: 01/11/2019 ರಿಂದ ಹಾಸ್ಟಲ್ ಕಟ್ಟಡದ ನೆಲಮಹಡಿಯನ್ನು ಬಾಡಿಗೆಗೆ ಪಡೆದುಕೊಳ್ಳಲಾಗಿದೆ. ಸದರಿ ಕಟ್ಟಡಗಳ ಬಾಡಿಗೆ ದರ ನಿಗದಿಪಡಿಸಲು ಲೋಕೋಪಯೋಗಿ ಇಲಾಖೆಯವರಿಗೆ ಅಗತ್ಯ ದಾಖಲೆಗಳೊಂದಿಗೆ ಪತ್ರವನ್ನು ಸಲ್ಲಿಸಲಾಗುತ್ತಿದೆ.

ಮುಂದುವರೆದು, ದಿನಾಂಕ: 02/11/2019 ರಂದು ಅಧ್ಯಕ್ಷರು, ದಿ ಗದಗ ಕೋ ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್ ಇವರು ವಿಶ್ವವಿದ್ಯಾಲಯಕ್ಕೆ ನೀಡಿದ ಪತ್ರದನ್ವಯ ಯಿಂದ ಬಾಡಿಗೆ ದರ ನಿಗದಿಯಾಗುವವರೆಗೆ, ವಿಶ್ವವಿದ್ಯಾಲಯಕ್ಕೆ ಬಾಡಿಗೆ ಪಡೆಯಲಾದ ತರಬೇತಿ ಕೇಂದ್ರ ಕಟ್ಟಡದ ಮೊದಲನೆಯ ಮಹಡಿಗೆ ರೂ: 1,00,000/- ದಂತೆ ಹಾಗೂ ಹಾಸ್ಟಲ್ ಕಟ್ಟಡದ ನೆಲ ಮಹಡಿಗೆ ರೂ: 50,000/- ದಂತೆ ಮುಂಗಡ ಬಾಡಿಗೆ ಹಣ ನೀಡಲು ಹಾಗೂ ಮುಂಬರುವ ದಿನಗಳಲ್ಲಿ ಪಿ.ಡಬ್ಲ್ಯೂ.ಡಿ ಯವರಿಂದ ಬಾಡಿಗೆ ದರ ನಿಗದಿಯಾದ ನಂತರ, ಪಾವತಿಸಬೇಕಾದ ಮಾಸಿಕ ಬಾಡಿಗೆ ಮೊತ್ತದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಕೋರಿ ಪತ್ರವನ್ನು ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ**

ಪ್ರಸ್ಥಾವನೆಯನ್ನು ಅನುಮೋದಿಸಲು ಹಾಗೂ ಲೋಕೋಪಯೋಗಿ ಇಲಾಖೆ ಕಟ್ಟಡದ ಬಾಡಿಗೆ ನಿಗಧಿಪಡಿಸುವವರೆಗೆ, ಕಟ್ಟಡವನ್ನು ವಿಶ್ವವಿದ್ಯಾಲಯ ಸುಪರ್ಧಿಗೆ ಪಡೆದ ದಿನದಿಂದ ಕಟ್ಟಡದ ಮಾಲೀಕರು ಕೋರಿರುವ ಮುಂಗಡ ಬಾಡಿಗೆ ಹಣದಲ್ಲಿ ಶೇ. 50ರಷ್ಟನ್ನು ಪಾವತಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

The Executive Council resolved to approve the proposal and to pay 50% of the rent requested by the owner as ad-hoc rent from the date of occupation of the premises pending fixation of rent by PWD.

## ಟೇಬಲ್ ಅಜೆಂಡಾ

**ವಿಷಯ ಸಂಖ್ಯೆ 16: ವಿಶ್ವವಿದ್ಯಾಲಯ ಆಯೋಜಿಸುವ ಸ್ಥಾಯಿ ಸಮಿತಿಗಳಲ್ಲಿ ಭಾಗವಹಿಸುವ ತಜ್ಞರಿಗೆ/ ಉನ್ನತ ವ್ಯಕ್ತಿಗಳಿಗೆ/ ಆಹ್ವಾನಿತರಿಗೆ ಗೌರವ ಸಂಭಾವನೆ, ಪ್ರಯಾಣ ಭತ್ಯೆ ಇತ್ಯಾದಿಗಳನ್ನು ಪಾವತಿಸುವ ದರಗಳನ್ನು ನಿಗಧಿ ಪಡಿಸುವ ಬಗ್ಗೆ.**

**Subject No. 16: To consider fixing the rate of Honorarium, TA/DA etc. to the Experts/Eminent persons/Invitees for attending the Standing Committee Meetings in the University.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 21-08-2019 ರಂದು ಮಾನ್ಯ ಕುಲಾಧಿಪತಿಗಳಿಂದ ಅನುಮೋಧನೆಗೊಂಡಿರುವ *The Karnataka State Rural Deelopment and Panchayat Raj University (Constitution of Standing Committee and Appointment of Ad-hoc Committees) Regulations, 2019,* ವಿನಿಯಮಗಳನುಸಾರ ಅಂತಹ ಸ್ಥಾಯಿ ಸಮಿತಿ / ಹಂಗಾಮಿ ಸಮಿತಿಗಳಿಗೆ ನೇಮಿಸುವ ಅಥವಾ ನಾಮನಿರ್ದೇಶ ಮಾಡುವ ಸದಸ್ಯರು ಅವರ ಘನತೆ / ತಜ್ಞತೆಗೆ ತಕ್ಕಂತೆ ಕಾರ್ಯನಿರ್ವಾಹಕ ಪರಿಷತ್ತು ಕಾಲಕಾಲಕ್ಕೆ ನಿಗಧಿಪಡಿಸುವ ಸಂಭಾವನೆ, ಸಾರಿಗೆ ಸೌಲಭ್ಯ, ಕಾರ್ಯನಿರ್ವಹಿಸುವ ಅಗತ್ಯವಿರುವ ಕಚೇರಿ, ಕಾರ್ಯದರ್ಶಿಯ ನೆರವು ಮತ್ತಿತರ ಸವಲತ್ತುಗಳಿಗೆ ಅರ್ಹರಿರುತ್ತಾರೆ.

ದಿನಾಂಕ 06-03-2019ರಂದು ಕಾರ್ಯನಿರ್ವಾಹಕ ಪರಿಷತ್ತು ರಚನೆಯಾಗುವ ಪೂರ್ವದಲ್ಲಿ ದಿನಾಂಕ 15-03-2018 ರಂದು ವಿಶ್ವವಿದ್ಯಾಲಯದ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ವಿಶ್ವವಿದ್ಯಾಲಯ ಆಯೋಜಿಸುವ ರಾಜ್ಯ ಮಟ್ಟದ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ/ ಸಮ್ಮೇಳನ/ ಕಾರ್ಯಾಗಾರಗಳಲ್ಲಿ ಪರಸ್ಥಳಗಳಿಂದ ಆಗಮಿಸಿ ಭಾಗವಹಿಸುವ ವಿಷಯ ತಜ್ಞರು/ ಆಹ್ವಾನಿತರು/ ಮುಖ್ಯ ಅತಿಥಿಗಳು/ ಅತಿಥಿ ಭಾಷಣಕಾರರುಗಳಿಗೆ, ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳ ಸದಸ್ಯರು, ಅಧಿಕಾರಿಗಳು, ಶಿಕ್ಷಕರು ಈ ಕೆಳಕಂಡಂತೆ ಆತಿಥ್ಯ, ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ಸಂಭಾವನೆಗಳನ್ನು ನೀಡಲು ತೀರ್ಮಾನಿಸಲಾಗಿರುತ್ತದೆ.

ಸದರಿ ತೀರ್ಮಾನದಂತೆ ಅತಿಥಿಗಳು/ ಸಂಪನ್ಮೂಲ ವ್ಯಕ್ತಿಗಳು ತಜ್ಞರು/ ಆಹ್ವಾನಿತರು ಒಂದನೆ ಅಥವಾ ಎರಡನೆ ದರ್ಜೆಯ ಹವಾನಿಯಂತ್ರಿತ ರೈಲು ಪ್ರಯಾಣ ಭತ್ಯೆಯ/ ಹವಾನಿಯಂತ್ರಿತ ಸ್ಲೀಪರ್/ ಓಲ್ವೊ ಬಸ್ ದರ/ ಪ್ರತಿ ಕಿ.ಮೀ.ಗೆ ರೂ. 8.00ರ ದರದಂತೆ ಪಡೆಯಲು ಅರ್ಹರಿರುತ್ತಾರೆ. ಅಲ್ಲದೇ ಅಹ್ವಾನಿತ ಅತಿಥಿಗಳಿಗೆ ರೂ. 1500.00 ಅಥವಾ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನಿಗದಿಪಡಿಸುವ ದರದಂತೆ ಸಂಭಾವನೆಯನ್ನು ನೀಡಲು, ಒಂದುವೇಳೆ ಶ್ರೇಷ್ಠ ವ್ಯಕ್ತಿ/ ಅಹ್ವಾನಿಕರಿಗೆ ಕುಲಪತಿಗಳ ಅನುಮೋದನೆಯೊಂದಿಗೆ ರೂ. 5000.00 ಸಂಭಾವನೆಯನ್ನು ನೀಡಲು ಅವಕಾಶವಿದೆ. ಹಾಗೂ ರೂ. 1000.00 ಅಥವಾ ರೂ. 1500.00 ವರೆಗೆ ವಾಸ್ತವ ಸ್ಥಳಿಯ ಸಾರಿಗೆ ಭತ್ಯೆ ನೀಡಬಹುದಾಗಿದೆ.

ಕಾರ್ಯನಿರ್ವಾಹಕ ಪರಿಷತ್ತು, ಶೈಕ್ಷಣಿಕ ಮಂಡಳಿ, ಕಾಮಗಾರಿ ಸಮಿತಿ ಮುಂತಾದ ಪ್ರಾಧಿಕಾರಗಳ ಸದಸ್ಯರಿಗೆ ಪ್ರತಿ ಕಿ.ಮೀ ಗೆ ರೂ. 10.00 ರಂತೆ (Actual distance separately for onward and return journey) – own or hired vehicle, If daily minimum distance is to be paid then the actual rent be paid for Maruthi Desire or equivalent A.C. vehicle, on production of bill/self-declaration for own vehicle or Air fare (Economy Class) with the approval of the Vice Chancellor) ನೀಡಬಹುದಾಗಿದೆ.

ಪ್ರಸ್ತುತ ವಿಶ್ವವಿದ್ಯಾಲಯ ಸಂದರ್ಭಕ್ಕನುಗುಣವಾಗಿ ಆಡಳಿತಾತ್ಮಕ / ಶೈಕ್ಷಣಿಕ ವಿಷಯಗಳಲ್ಲಿ ಸಲಹೆ/ಅಭಿಪ್ರಾಯ ಪಡೆಯಲು ಆಯೋಜಿಸಬಹುದಾದ **ಸ್ಥಾಯಿ ಸಮಿತಿಗಳ** ಸಭೆಗಳಲ್ಲಿ ಭಾಗವಹಿಸಲು ಪರಸ್ಥಳಗಳಿಂದ ಆಗಮಿಸುವ ತಜ್ಞರು/ ಶ್ರೇಷ್ಠ ವ್ಯಕ್ತಿಗಳು/ ಆಹ್ವಾನಿತರಿಗೆ ಸೂಕ್ತ ಸಂಭಾವನೆಯನ್ನು ಪಾವತಿಸಲು ದರಗಳನ್ನು ನಿಗಧಿಪಡಿಸಬೇಕಾಗಿದೆ. ಮೇಲಿನ ದರಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಾಯಿ ಸಮಿತಿಗಳ ಅಧ್ಯಕ್ಷರಿಗೆ ರೂ. 3,000/- ಹಾಗು ಸದಸ್ಯರಿಗೆ ರೂ. 2,500/- ಸಂಭಾವನೆ, ಹಾಗು ಮೇಲೆ ಉಲ್ಲೇಖಿಸಿರುವ ದರಗಳಲ್ಲಿ ಪ್ರಯಾಣ ಭತ್ಯೆ / ದಿನ ಭತ್ಯೆಯನ್ನು ನೀಡಲು ಹಾಗು ಸ್ವಂತ ವಾಹನದಲ್ಲಿ ಪ್ರಯಾಣಿಸಿದರೆ ರಸ್ತೆ ಮೈಲೇಜ್‌ನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಿಗೆ ಅನ್ವಯಿಸುವ ದರಗಳಲ್ಲಿ ರೂ. 10/- ಪ್ರತಿ ಕಿ. ಮೀ. ಪಾವತಿಸುವ ಬಗ್ಗೆ ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸಬಹುದಾಗಿದೆ.

ಆದುದರಿಂದ ಈ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**Reference Note:**

As per *the Karnataka State Rural Deelopment and Panchayat Raj University (Constitution of Standing Committee and Appointment of Ad-hoc Committees) Regulations, 2019* approved by the Hon'ble Chancellor on 21/08/2019, the persons/s so appointed or nominated to the standing committee or ad-hoc committee shall be entitled for such remuneration / honorarium, transport facility, functional office in the University or its Regional Office or Regional Centres, secretarial assistance and such other facilities commensurate with their position/expertise as determined by the Executive Council from time to time.

It is submitted that prior to the constitution of the Executive Council on 06/03/2019, the University after a meeting with the Statutory Officers on 15/03/2018, had fixed the rates of TA/DA/Honorarium and providing hospitality to the outstation experts/invitees/resource persons/chief guests/guest speakers for attending State, National and International Conferences/Seminars, Workshops, Members of various Authorities of the University, Officers, Faculty Members etc.

As per these decisions, the Guests/Resource persons/experts/invitees etc. are entitled for First or Second Class AC train fare (on production of Ticket)/A.C. Sleeper/Volvo bus fare/Road mileage of Rs. 8 per k.m. Secondly, a provision has been made for payment of Honorarium of Rs. 1,500/- (Rupees Thousand Five Hundred) or as fixed by the University from time to time to such invited guests. However, in case of eminent guests the honorarium may be upto 5,000 with specific approval of VC. Further, they are entitled for Local Conveyance up to 1000/- (each side) if claimed on self declaration, or actual or up to Rs. 1,500/- on production of bill and if above 1,500/- on production of bill with approval of Vice Chancellor.

The Members of the Authorities like, Executive Council, Academic Council, Works Committee etc., are being paid the road mileage @ Rs. 10/- per k.m. (Actual distance separately for onward and return journey) – own or hired vehicle, If daily minimum distance is to be paid then the actual rent be paid for Maruthi Desire or equivalent A.C. vehicle, on production of bill/self-declaration for own vehicle or Air fare (Economy Class) with the approval of the Vice Chancellor.

Now, there is need for fixing the rate of honorarium/remuneration, apart from eligible TA/DA etc. to the experts/eminent experts/persons/invitees who attend the Standing Committee meetings organized by the University for the purpose of consultations/advice on various administrative and academic matters.

Keeping the above rates in view, the Executive Council may consider paying Rs. 3,000/- to the Chairperson and Rs. 2,500/- to the members as Honorarium/Remuneration and TA/DA at the rates indicated above to the Members of such Standing committees. Further, Road Mileage, if travelled by own vehicle, the rates applicable to the Members of the Executive Council @ Rs. 10/- per k.m. may be paid.

Hence, the matter is placed before the Executive Council for consideration and decision.

**ನಿರ್ಣಯ**

ವಿಶ್ವವಿದ್ಯಾಲಯ ಆಯೋಜಿಸುವ ಸ್ಥಾಯಿ ಸಮಿತಿಯ ಅಧ್ಯಕ್ಷರಿಗೆ ರೂ. 3,000–00 ಹಾಗೂ ಸದಸ್ಯರಿಗೆ ಸದಸ್ಯರಿಗೆ ರೂ. 2,5000–00 ದರಗಳಲ್ಲಿ ಸಂಭಾವನೆ ಹಾಗೂ ಪ್ರಸ್ಥಾಪಿತ ಪ್ರಯಾಣ ದರ, ದಿನ ಭತ್ಯೆ, ರಸ್ತೆ ಮೈಲೇಜ್ ಮತ್ತು ಇನ್ನಿತರ ಸೌಲಭ್ಯಗಳನ್ನು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಿಗೆ ನೀಡುವ ದರದಲ್ಲಿ ನೀಡಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

The Executive Council resolved to approve the proposal for the payment of Honorarium/Remuneration @ Rs. 3,000/- to the Chairperson and Rs. 2,500/- to the members of the Standing Committee and TA/DA/road mileage and other facilities as applicable to Executive Council Members.

**Subject No.17: To consider revision of Remuneration/Honorarium to the outstation experts/Invitees/resource persons/chief guests/guest speakers for atteending State, National and International Conferences/Seminars, Workshops etc., organized by KSRDPR University – reg.**

**Reference Note:**

As per Clause 7 of *"The Karnataka State Rural Development and Panchayat Raj University Payment of Allowances, Sitting Fees etc. to the members of the Authorities, Officers and Members of various Committees and others Regulations, 2017"*, approved by the Chancellor on 2nd January 2018, persons invited as Guests, Guests of Honour, Experts, Resource Persons, shall be paid honorarium, T.A., D.A. and other Allowances as fixed by the University from time to time.

It is submitted that prior to the constitution of the Executive Council on 06/03/2019, the University after a meeting with the Statutory Officers on 15/03/2018, had fixed the following rates of TA/DA/Honorarium and providing hospitality to the outstation experts/invitees/resource persons/chief guests/guest speakers for attending State, National and International Conferences/Seminars, Workshops etc.

As per this decision, apart from TA/DA, the Guests/Resource persons/ experts/ invitees etc. may be paid an Honorarium of Rs. 1,500/- (Rupees Thousand Five Hundred) or as fixed by the University from time to time. However, in case of eminent guests the honorarium may be upto 5,000 with specific approval of Vice Chancellor.

It is submitted that the Government of Karnataka vide Order No. ಸಿಆಸುಇ 80 ಇಆತ 2019, ದಿನಾಂಕ 04-09-2019, have enhanced the rates of Honorarium payable to the Resources persons invited to the Administrative Training Institute @ Rs. 2,000/- per session, and for the Guest Speakers of subject eminence @ Rs. 5,000/- person. Keeping this in view, it has been proposed in Subject No. 12 of the agenda, for payment of Rs. 2,000/- per session to

the resource persons and Rs. 5,000/- for persons of subject eminence invited for Training Programmes.

Under the circumstances, in order to have a uniform policy, the rate of Honorarium payable to the outstation experts/invitees/resource persons/chief guests/guest speakers for attending State, National and International Conferences/ Seminars, Workshops etc. may have to be revised from Rs. 1,500/- to Rs. 2,000/-.

The matter is placed before the Executive Council for consideration and decision.

**ನಿರ್ಣಯ**

ವಿಶ್ವವಿದ್ಯಾಲಯ ಆಯೋಜಿಸುವ ರಾಜ್ಯ, ರಾಷ್ಟ್ರೀಯ, ಅಂತರ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ / ಸಮ್ಮೇಳನ, ಕಾರ್ಯಾಗಾರ ಮುಂತಾದವುಗಳಿಗೆ ಭಾಗವಹಿಸಲು ಪರಸ್ಥಳಗಳಿಂದ ಆಗಮಿಸುವ ತಜ್ಞರು / ಆಹ್ವಾನಿತರು / ಸಂಪನ್ಮೂಲ ವ್ಯಕ್ತಿಗಳು / ಮುಖ್ಯ ಅತಿಥಿಗಳು / ಅತಿಥಿ ಭಾಷಣಕಾರರು ಇವರಿಗೆ ನೀಡುವ ಕನಿಷ್ಟ ಸಂಭಾವನೆ ದರವನ್ನು ರೂ. 1,500–00 ರಿಂದ ರೂ. 2,000–00 ಕ್ಕೆ ಈ ಕೂಡಲೇ ಜಾರಿಗೆ ಬರುವಂತೆ ಪರಿಷ್ಕರಿಸಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

**RESOLUTION**

The Executive Council resolved to approve the proposal for revision of rates of minimum Honorarium payable to the outstation experts/invitees/resource persons/chief guests/guest speakers for attending State, National and International Conferences/ Seminars, Workshops etc. organized by the University from Rs. 1,500/- to Rs. 2,000/- with immediate effect.

The meeting concluded with thanks to the Members and the Chair.

16/11/19.

Vice Chancellor (Acting)
Chairperson & Registrar
Ex-Officio Member Secretary